بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 04

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 39

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

28 ಸೆಪ್ಟೆಂಬರ್ 2023, 28 ತಬೂಕ್ 1402 ಹಿಜರಿ ಶಮ್‌ಸಿ,
12 ರಬೀಉಲ್ ಅವ್ವಲ್ 1445 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

اَفَلَا يَتُوْبُوْنَ اِلَى اللّٰهِ
وَيَسْتَغْفِرُوْنَهٗ
وَاللّٰهُ غَفُوْرٌ رَّحِيْمٌ ○

**(ಅಲ್ ಮಾಇದಃ: 75)**

**ಅಂದರೆ: ಅವರು ಇನ್ನು ಕೂಡ ಪಶ್ಚಾತ್ತಾಪಪಟ್ಟು ಅಲ್ಲಾಹನೆಡೆಗೆ ಮರಳಿ ಅವನೊಡನೆ ಪಾಪವಿಮುಕ್ತಿಗಾಗಿ ಯಾಚಿಸುವುದಿಲ್ಲವೇ? ಅಲ್ಲಾಹನು ಬಹಳವಾಗಿ ಕ್ಷಮಿಸುವವನೂ ಕಾರುಣ್ಯನಿಧಿಯೂ ಆಗಿದ್ದಾನೆ.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಹಝ್‌ರತ್ ಪೈಗಂಬರ್(ಸ) ಸಾಲಗಾರನಾಗದಂತಾಗಲು ಪ್ರಾರ್ಥಿಸುತ್ತಿದ್ದರು.

**(2397)** ಹಝ್‌ರತ್ ಆಯಿಶಾ(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ನಮಾಝಿನಲ್ಲಿ ದುಆ ಮಾಡುತ್ತಿದ್ದರು ಮತ್ತು ಹೇಳುತ್ತಿದ್ದರು. ಓ ನನ್ನ ಅಲ್ಲಾಹನೇ! ನಾನು ಪಾಪಗಳಿಂದ ಹಾಗೂ ಸಾಲದಿಂದ ನಿನ್ನ ಅಭಯ ಯಾಚಿಸುತ್ತೇನೆ. ಒಬ್ಬನು ಪ್ರವಾದಿ(ಸ) ರವರಲ್ಲಿ ಕೇಳಿದನು. ಪೈಗಂಬರ್(ಸ) ರವರೊಂದಿಗೆ ನೀವು ಸಾಲದಿಂದ ತುಂಬಾ ಅಭಯ ಯಾಚಿಸುತ್ತೀರಿ. ಪೈಗಂಬರ್(ಸ) ಹೇಳಿದರು. ಮನುಷ್ಯನು ಸಾಲಗಾರನಾದರೆ ಸುಳ್ಳು ಹೇಳುತ್ತಾನೆ. ಭರವಸೆ ಕೊಟ್ಟು ಭರವಸೆ ಈಡೇರಿಸುವುದಿಲ್ಲ.

ಹಝ್‌ರತ್ ಪೈಗಂಬರ್(ಸ) ಹೀಗೆ ಪ್ರಾರ್ಥಿಸುತ್ತಿದ್ದರು.

اللّٰهُمَّ اِنِّيْ اَعُوْذُبِكَ مِنَ الْهَمِّ وَالْحُزْنِ وَ
اَعُوْذُبِكَ مِنَ الْعَجْزِ وَالْكَسَلِ وَاَعُوْذُبِكَ مِنَ
الْجُبْنِ وَالْبُخْلِ وَاَعُوْذُبِكَ مِنَ الْفَقْرِ وَالْقِلَّةِ وَ
اَعُوْذُبِكَ مِنْ غَلَبَةِ الدَّيْنِ وَقَهْرِ الرِّجَالِ

(ಸುನನ್ ಅಬೀದಾವೂದ್, ಕಿತಾಬುಸ್ಸಲಾತ್, ಬಾಬ್ ಫಿಲ್ ಇಸ್ತಿಆಝು)

ಅನುವಾದ: ಓ ಅಲ್ಲಾಹ್! ನಾನು ಕಷ್ಟಗಳ ಚಿಂತೆಯಿಂದ ಮತ್ತು ದು:ಖದಿಂದ ನಿನ್ನ ಅಭಯ ಯಾಚಿಸುತ್ತೇನೆ. ಸಾಮಾನುಗಳಿದ್ದೂ ಉಪಯೋಗ ಮಾಡದೇ ಆಲಸಿ ಮಾಡುವುದರಿಂದಲೂ ನಿನ್ನ ಅಭಯ ಯಾಚಿಸುತ್ತೇನೆ. ಹೇಡಿತನ ಹಾಗೂ ಜಿಪುಣತನದಿಂದಲೂ ನಿನ್ನ ಅಭಯ ಯಾಚಿಸುತ್ತೇನೆ ಬೇಡುವುದರಿಂದ ಮತ್ತು ಬಡತನದಿಂದಲೂ ನಿನ್ನ ಅಭಯ ಯಾಚಿಸುತ್ತೇನೆ ಸಾಲದ ಒತ್ತಡದಿಂದ ಮತ್ತು ಜನರ ಒತ್ತಡದಿಂದಲೂ ಅಭಯ ಯಾಚಿಸುತ್ತೇನೆ. ಸಾಲ ಒತ್ತಡದಿಂದ ಮತ್ತು ಜನರ ಒತ್ತಡದಿಂದಲೂ. **(ಸಹೀಹ್ ಬುಖಾರಿ, ಸಂಪುಟ-4, ಕಿತಾಬುಲ್ ಇಸ್ತಖ್ರಾಝ್, ಮುದ್ರಣ 2008 ಖಾದಿಯಾನ್)**

ಪವಿತ್ರ ಖುರ್‌ಆನ್‌ನಲ್ಲಿ **"ವ ಅಮ್ಮಸ್ಸಾಯಿಲ ಫಲಾ ತನ್‌ಹರ್"** ಎಂಬ ಆಜ್ಞಾಪನೆಯಿದೆ ಎಂದೆರ ಬೇಡುವವರನ್ನು ಗದರಿಸಬೇಡಿರಿ.
ಆದ್ದರಿಂದ ನೆನಪಿಡಿ. ಬೇಡುವವರನ್ನು ಗದರಿಸಬೇಡಿ, ಏಕೆಂದರೆ ಅದು ಒಂದು ರೀತಿಯ ಅನ್ಯೈತಿಕತೆಯನ್ನು ಬಿತ್ತುತ್ತದೆ. ಬೇಡುವವರ ಮೇಲೆ ಕೋಪ ತೋರಿಸಲು ಆತುರಪಡಬೇಡಿ. ಇದೇ ನೈತಿಕತೆಯ ಗುಣವಾಗಿದೆ.

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಬೇಡುವವರನ್ನು ಗದರಿಸಬಾರದು

ಕೆಲವು ಪುರುಷರಿಗೆ ಬೇಡುವವರನ್ನು ಕಂಡರೆ ಕೋಪಗೊಳ್ಳುವ ಅಭ್ಯಾಸವಿರುತ್ತದೆ. ಮತ್ತು ಮೌಲವಿತ್‌ನ ಥಾಟಿ ಇದ್ದರೆ, ಅವರು ಏನನ್ನಾದರೂ ನೀಡುವ ಬದಲು, ಏನನ್ನಾದರೂ ನೀಡುವ ಸಮಸ್ಯೆಗಳನ್ನು ವಿವರಿಸಲು ಪ್ರಾರಂಭಿಸುತ್ತಾರೆ ಮತ್ತು ಕೆಲವೊಮ್ಮೆ ತಮ್ಮದೇ ಆದ ಮೌಲವಿಯತ್‌ನ ದರ್ಪ ತೋರುವ ಮೂಲಕ ಅವರು ತುಂಬಾ ಸೋಮಾರಿ ಎಂದು ಹೇಳಿಬಿಡುತ್ತಾರೆ. ಇಂತಹವರ ಬುದ್ಧಿ ಮತ್ತು ಆಲೋಚನೆಗಳ ಕುರಿತು ವಿಷಾದ ಅನಿಸುತ್ತದೆ. ಇದು ಒಳ್ಳೆಯ ಹೃದಯ ಮತ್ತು ಒಳ್ಳೆಯ ಸ್ವಭಾವದ ವ್ಯಕ್ತಿಗೆ ಸಿಗುತ್ತದೆ. ಬೇಡುವವನು ಆರೋಗ್ಯವಾಗಿದ್ದು ಸಹ ಬೇಡಿದರೆ ಸ್ವಯಂ ಅವನು ಪಾಪ ಮಾಡಿದ ಹಾಗೆ ಎಂದು ಯೋಚಿಸುವುದಿಲ್ಲವೇ. ಅವನಿಗೆ ಏನಾದರಷ್ಟು ನೀಡಿದರೆ ಪಾಪವಂತೂ ಆಗುವುದಿಲ್ಲ. ಬದಲಿಗೆ ಪವಿತ್ರ ಹದೀಸಿನಲ್ಲಿ **"ಲೌ ಅತಾಕ ರಾಕಿಬ"** ಎಂಬ ಪದಗಳು ಉಲ್ಲೇಖಿಸಲಾಗಿವೆ ಅಂದರೆ ಬೇಡುವವನು ಸವಾರರಾಗಿ ಬಂದರೂ ಸಹ ಅವನಿಗೆ ಏನಾದರಿಷ್ಟು ನೀಡಬೇಕು. ಮತ್ತು ಪವಿತ್ರ ಖುರ್‌ಆನ್‌ನಲ್ಲಿ **"ವ ಅಮ್ಮಸ್ಸಾಯಿಲ ಫಲಾ ತನ್‌ಹರ್"** (ಅಝ್ಝುಹಾ:11) ಅಂದರೆ ಬೇಡುವವರನ್ನು ಗದರಿಸಬೇಡಿ ಎಂದು ಹೇಳಲಾಗಿದೆ. ಅಂಥವರನ್ನು ಗದರಿಸಬೇಡಿ ಮತ್ತು ಇಂತಹವರನ್ನು ಗದರಿಸಬೇಡಿ ಎಂದು ಇದರಲ್ಲಿ ನಿರ್ದಿಷ್ಟಪಡಿಸಲಾಗಿಲ್ಲ. ಆದ್ದರಿಂದ ನೆನಪಿಡಿ. ಬೇಡುವವರನ್ನು ಗದರಿಸಬಾರದು. ಏಕೆಂದರೆ ಅದು ಒಂದು ರೀತಿಯ ಅನ್ಯೈತಿಕತೆಯನ್ನು ಬಿತ್ತುತ್ತದೆ. ನೈತಿಕ ಗುಣವೇನೆಂದರೆ ಬೇಡುವವರ ಮೇಲೆ ಶೀಘ್ರ ಕೋಪವಾಗಬಾರದು. ಇದು ಶೈತಾನನ ಪ್ರವೃತ್ತಿಯಾಗಿದೆ. ಇದರಿಂದ ಸತ್ಕರ್ಮಗಳಿಂದ ವಂಚಿತರಾಗುವಿರಿ ಮತ್ತು ದುಷ್ಕರ್ಮಿಗಳಾಗುವಿರಿ.

### ಒಂದು ಪುಣ್ಯವು ಇನ್ನೊಂದು ಪುಣ್ಯವನ್ನು ಹುಟ್ಟು ಹಾಕುತ್ತದೆ.

ಒಂದು ಒಳ್ಳೆಯ ಕಾರ್ಯವು ಇನ್ನೊಂದು ಒಳ್ಳೆಯ ಕಾರ್ಯಕ್ಕೆ ಕಾರಣವಾಗುತ್ತದೆ ಮತ್ತು ಅದೇ ರೀತಿಯಲ್ಲಿ ಒಂದು ಕೆಟ್ಟ ಕಾರ್ಯವು ಇನ್ನೊಂದು ಕೆಟ್ಟದಕ್ಕೆ ಕಾರಣವಾಗುತ್ತದೆ. ಒಂದು ವಸ್ತು ಇನ್ನೊಂದು ವಸ್ತುವನ್ನು ಹೀರಿಕೊಳ್ಳುವಂತೆ, ಸರ್ವಶಕ್ತನಾದ ಅಲ್ಲಾಹನು ಈ ಹೀರಿಕೊಳ್ಳುವಿಕೆಯ ಸಮಸ್ಯೆಯನ್ನು ಪ್ರತಿ ಕಾರ್ಯದಲ್ಲಿ ಇರಿಸಿದ್ದಾನೆ. ಆದ್ದರಿಂದ ಬೇಡುವವರನ್ನು ದಯೆಯಿಂದ ಉಪಚರಿಸಿದಾಗ, ಈ ರೀತಿ ನೈತಿಕ ದಾನ ಮಾಡಿದಾಗ ಸಂಕೋಚನೆಯೂ (ಬಡತನ, ಕಷ್ಟ) ದೂರವಾಗಿ ಇತರ ಸತ್ಕಾರ್ಯಗಳನ್ನು ಮಾಡಿ ಆತನಿಗೆ ಏನಾದರೂ ನೀಡುತ್ತಾನೆ.

**(ಮಲ್‌ಫೂಝಾತ್, ಸಂಪುಟ-1, ಪುಟ-480, ಮುದ್ರಣ 2018 ಖಾದಿಯಾನ್)**

ಅಹಂಕಾರಿಯಾದವನು ನಾನು ಎಲ್ಲವನ್ನು ಪಡೆದವನಾಗಿದ್ದೇನೆ ಎಂದು ಭಾವಿಸುತ್ತಾನೆ. ಆದ್ದರಿಂದ ಇನ್ನಷ್ಟು ಪ್ರಗತಿಗಳಿಂದ ವಂಚಿತನಾಗುತ್ತಾನೆ.
ಆದ್ದರಿಂದ ಅಹಂಕಾರ ಪಡಬೇಡ! ನಿನ್ನೊಳಗೆ ಏನಾದರೂ ಲೌಕಿಕ ಗುಣವೊಂದ್ದಿದ್ದರೆ ಜನರಿಗೆ ಪ್ರಯೋಜನವಾಗುವಂತೆ ಮಾಡು. ಅದರಿಂದ ನೀನು ಸಮುದಾಯದ ಸರದಾರನಾಗಬಹುದು.

ಸಯ್ಯಿದುನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) ಬನೀ ಇಸ್ರಾಈಲ್‌ನ ವಚನ 38 **ವಲಾ ತಮ್‌ಶಿ ಫಿಲ್ ಅರ್ಝಿ ಮರಹಾ, ಇನ್ನಕ ತಖ್ರಿಕಲ್ ಅರ್ಝ ವಲನ್ ತಬ್ಲುಗ್ಹುಲ್ ಜಿಬಾಲ ತೂಲಾ** ನ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ.

ಮೊದಲು........ ಅಲ್ಲಾಹನಿಗೆ ಅಥವಾ ಬೇರೆ ಮನುಷ್ಯರಿಗೆ ಸಂಬಂಧಪಟ್ಟವರ ನೀತಿಯ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಇದೀಗ ಅವರ ವ್ಯಕ್ತಿಗತ ನೀತಿಯ ಬಗ್ಗೆ ಪ್ರಸ್ತಾಪಿಸಲಾಗಿದೆ. ತಮ್ಮೊಳಗೆ ಏನಾದರೂ

*(ಪುಟ ಸಂಖ್ಯೆ-11 ರಲ್ಲಿ ಮುಂದುವರಿಸಲಾಗಿದೆ)*

لَا اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

"ಮುಜ್‌ಕೋ ಕಾಫಿರ್ ಕಹ್‌ಕೆ ಅಪ್ನೆ ಕುಫ್ರ್ ಪರ್ ಕರ್ತೆ ಹೈಂ ಮುಹರ್ ಎ ತೋ ಹೈ ಸಬ್ ಶಕಲ್ ಉನ್‌ಕೀ ಹಮ್ ತೋ ಹೈಂ ಆಯಿನಾದಾರ್॥"

ಅನುವಾದ: ನನ್ನನ್ನು ಅವಿಶ್ವಾಸಿ (ಕಾಫಿರ್) ಎಂದು ಘೋಷಿಸಿ ಸ್ವಯಂ ತನ್ನ ಅವಿಶ್ವಾಸವನ್ನು ದೃಡೀಕರಿಸುತ್ತಿದ್ದಾರೆ. ಇವೆಲ್ಲವು ಅವರ ಕಾರಸ್ತಾನವಾಗಿದೆ, ನವು ಕನ್ನಡಿಯಾಗಿದ್ದೇವೆ ಅಷ್ಟೇ.

(ಹಝ್ರತ್ ಮಸೀಹ್ ಮೌಊದ್(ಅಲೈಹಿಸ್ಸಲಾಮ್))................(5)

## ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಮೇಲೆ "ಮುನ್ಸಿಫ್" ಹೈದರಾಬಾದ್ ಪತ್ರಿಕೆ ಮಾಡಿರುವ ಆಕ್ಷೇಪಣೆಗಳಿಗೆ ಉತ್ತರ.

ಕಳೆದ ನಾಲ್ಕು ಸಂಚಿಕೆಗಳಿಂದ, ನಾವು ಅಹ್ಮದಿಯಾ ಜಮಾಅತ್ ಸಂಸ್ಥಾಪಕ, ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ, ವಾಗ್ದತ್ತ ಮಸೀಹ್ ಮತ್ತು ಮಹದಿ ಅಲೈಹಿಸ್ಸಲಾಮ್ ಅವರ ಬಗ್ಗೆ "ಮುನ್ಸಿಫ್" ಹೈದರಾಬಾದ್ ಪತ್ರಿಕೆಯ ಆಕ್ಷೇಪಣೆಗಳಿಗೆ ಪ್ರತಿಕ್ರಿಯಿಸುತ್ತಿದ್ದೇವೆ. ಆಕ್ಷೇಪಣೆಗಳ ವಿವರಗಳು ಮತ್ತು ಅವುಗಳ ಹಿನ್ನೆಲೆಯನ್ನು ಆಗಸ್ಟ್ 17 ರ ಸಂಚಿಕೆಯಲ್ಲಿ ನೋಡಬಹುದು. ಸೈಯದುನಾ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ ವಾಗ್ದತ್ತ ಮಸೀಹ್ ಮತ್ತು ಮಹದಿ ಅಲೈಹಿಸ್ಸಲಾಮ್ ಬ್ರಿಟಿಷರೊಂದಿಗೆ ಪಿತೂರಿ ನಡೆಸಿದ್ದಾರೆ (ನೌಝುಬಿಲ್ಲಾಹ್ ಮಿನ್ ಝಾಲಿಕ್) ಎಂದು ಮುನ್ಸಿಫ್ ಆಕ್ಷೇಪ ವ್ಯಕ್ತಪಡಿಸಿತ್ತು. ಈ ಆಕ್ಷೇಪಣೆಯು ಕೇವಲ ಪೊಳ್ಳು, ಸುಳ್ಳು, ಆಧಾರರಹಿತ ಮತ್ತು ಅತ್ಯಂತ ಮೂರ್ಖತನದ ಆಕ್ಷೇಪವಾಗಿದೆ ಎಂದು ನಾವು ವಾದಗಳು ಮತ್ತು ಪುರಾವೆಗಳೊಂದಿಗೆ ಸ್ಪಷ್ಟಪಡಿಸಿದ್ದೇವೆ. ಈಗ ನಾವು ಈ ಆಕ್ಷೇಪಣೆಗೆ ಇನ್ನೊಂದು ಅಂಶದಿಂದ ಉತ್ತರಿಸುತ್ತೇವೆ. ಮಿರ್ಝಾ ಸಾಹಿಬ್ ಆಂಗ್ಲ ಸರ್ಕಾರವನ್ನು ಹೊಗಳಿ ಅದರ ವಿರುದ್ಧ ಜಿಹಾದ್ ಮಾಡುವುದನ್ನು ನಿಷೇಧಿಸಿದರೆಂದು ಹೇಳಲಾಗುತ್ತದೆ. ಹಝ್ರತ್ ಮಸೀಹ್ ಮೌಊದ್(ಅ) ಅವರ ಇಂಗ್ಲಿಷ್ ಸರ್ಕಾರದ ಹೊಗಳಿಕೆಯ ಪ್ರಶ್ನೆಗೆ ಸಂಬಂಧಿಸಿದಂತೆ, ನಾವು ಹಿಂದಿನ ಸಂಚಿಕೆಯಲ್ಲಿ ಉತ್ತರವನ್ನು ನೀಡಿದ್ದೇವೆ. ಕೇವಲ ಹಝ್ರತ್ ಮಸೀಹ್ ಮೌಊದ್(ಅ) ಮಾತ್ರವಲ್ಲ, ಬದಲಿಗೆ ಆ ಕಾಲಘಟ್ಟದ ಮಹಾನ್ ಉನ್ನತ ಮಟ್ಟದ ಮುಸ್ಲಿಂ ಉಲಮಾಗಳು ಮತ್ತು ವಿದ್ವಾಂಸರು ಬ್ರಿಟಿಷ್ ಸರಕಾರದ ಹೊಗಳಿಕೆಯಲ್ಲಿ ತಲ್ಲೀನರಾಗಿದ್ದರು. ಅಷ್ಟೇ ಅಲ್ಲದೆ, ಬ್ರಿಟಿಷ್ ಸರಕಾರದಿಂದ ಪ್ರಯೋಜನ ಪಡೆಯುತ್ತಿದ್ದರು. ಈ ಸಂಚಿಕೆಯಲ್ಲಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇಂಗ್ಲಿಷ್ ಸರ್ಕಾರದಿಂದ ಜಿಹಾದ್ ಅನ್ನು ನಿಷೇಧಿಸಿದರು ಎಂಬ ಆಕ್ಷೇಪಣೆಗೆ ನಾವು ಉತ್ತರಿಸುತ್ತೇವೆ. ಜಿಹಾದ್ ಹೆಸರಿನಲ್ಲಿ ಸರ್ಕಾರದಿಂದ ದಂಗೆ, ಅನ್ಯಾಯದ ರಕ್ತಪಾತ ಮತ್ತು ಹತ್ಯೆಗಳನ್ನು ಅವರು(ಅ) ನಿಷೇಧಿಸಿದ್ದು ನಿಜ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಲಾಮ್ ಅವರು ಹೇಳುತ್ತಾರೆ:

"ಯಾವ ಸರಕಾರದ ಅಡಿಯಲ್ಲಿ ಮುಸಲ್ಮಾನರು ಶಾಂತಿ, ಸಮೃದ್ಧಿ ಮತ್ತು ಕ್ಷೆಮ ಹಾಗೂ ಸ್ವತಂತ್ರದಲ್ಲಿ ಜೀವಿಸುತ್ತಿದ್ದಾರೆ, ಅದರ ಕೊಡುಗೆಗಳು ಮತ್ತು ಉಪಕಾರಿ ಕಾರ್ಯಗಳಿಂದ ಕೃತಜ್ಞತರಾಗಿದ್ದಾರೆ, ಅವರ ಶುಭ ಆಡಳಿತದಲ್ಲಿ ಸತ್ಕರ್ಮ ಹಾಗೂ ಸನ್ಮಾರ್ಗ ಹಾದಿಯಲ್ಲಿ ಸಹಕಾರಿಯಾಗಿದೆ. ಅಂತಹ ಸರಕಾರದ ವಿರುದ್ಧ ಜಗಳ ಧರ್ಮಯುದ್ಧ (ಜಿಹಾದ್) ಮಾಡುವುದು ತರವಲ್ಲ ಎಂಬ ಅಭಿಮತಕ್ಕೆ ಎಲ್ಲಾ ಮುಸ್ಲಿಮರು ಸಹಮತ ಹೊಂದಿದ್ದಾರೆ ಮತ್ತು ಇಂತಹ ಸ್ಥಿತಿಯಲ್ಲಿ ಶರೀಅತ್ ಕೂಡ ಸ್ಪಷ್ಟ ಅಬಿಮತ ಹೊಂದಿದ್ದಾರೆ. ಅವರ ವಿರುದ್ಧ ಯುದ್ಧ ಸಾರುವುದು ನಿಷಿದ್ಧ."
(ಮಜ್‌ಮೂಅ ಇಶ್ತಿಹಾರಾತ್, ಸಂಪುಟ–1, ಪುಟ–66)

ಅದೇ ನಿಲುವು ಹಝ್ರತ್ ಸಯ್ಯದ್ ಅಹ್ಮದ್ ಬರೇಲ್ವಿ (ರಹ) ಹದಿಮೂರನೇ ಶತಮಾನದ ಸುಧಾರಕರು ಹೊಂದಿರುತ್ತಾರೆ. ಮೌಲಾನ ಮುಹಮ್ಮದ್ ಜಾಫರ್ ಥಾನೇಸರಿ "ಸವಾನೆ ಅಹ್ಮದಿ" ಲೇಖಕರು ಹೇಳುತ್ತಾರೆ. ಒಬ್ಬರು ಪ್ರಶ್ನೆ ಮಾಡುತ್ತಾರೆ, ಇಸ್ಲಾಂ ಧರ್ಮವನ್ನು ನಿರಾಕರಿಸಿ ಈ ದೇಶವನ್ನು ಆಳುತ್ತಿರುವ ಬ್ರಿಟಿಷರ ವಿರುದ್ಧ ಜಿಹಾದ್ ಮಾಡಿ ಭಾರತವನ್ನು ಏಕೆ ತೆಗೆದುಕೊಳ್ಳಬಾರದು? ಅದಕ್ಕೆ ಉತ್ತರ ನೀಡುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು:

"ಬ್ರಿಟಿಷ್ ಸರ್ಕಾರವು ಇಸ್ಲಾಂ ಧರ್ಮವನ್ನು ನಿರಾಕರಿಸುತ್ತದೆ, ಆದರೆ ಮುಸ್ಲಿಮರನ್ನು ದಬ್ಬಾಳಿಕೆ ಮಾಡುವುದಿಲ್ಲ ಮತ್ತು ಕಿರುಕುಳ ನೀಡುವುದಿಲ್ಲ ಮತ್ತು ಧಾರ್ಮಿಕ ಕರ್ತವ್ಯಗಳು ಮತ್ತು ಕಡ್ಡಾಯ ಆರಾಧನೆಯನ್ನು ಮಾಡುವುದನ್ನು ತಡೆಯುವುದಿಲ್ಲ. ನಾವು ಅವರ ದೇಶದಲ್ಲಿ ಬಹಿರಂಗವಾಗಿ ಬೋಧಿಸುತ್ತೇವೆ ಮತ್ತು ಧರ್ಮವನ್ನು ಪ್ರಚಾರ ಮಾಡುತ್ತೇವೆ, ಅವರು ಎಂದಿಗೂ ಅಡ್ಡಿಯಾಗುವುದಿಲ್ಲ ಅಥವಾ ವಿರೋಧಿಸುವುದಿಲ್ಲ ...... ನಮ್ಮ ಮುಖ್ಯ ಕೆಲಸವೆಂದರೆ ತೌಹೀದ್ ಇಲಾಹಿಯ ಪ್ರಕಟಣೆ ಮತ್ತು ಸಯ್ಯದುಲ್–ಮರ್ಸಲೀನ್(ಸ) ಅವರ ಜಿವನ ಪ್ರನಾಳಿಕೆಯಲ್ಲಿ ಚೈತನ್ಯ ತುಂಬುವುದಾಗಿದೆ. ಆದ್ದರಿಂದ ನಾವು ಈ ದೇಶದಲ್ಲಿ ನಿಲ್ಲಿಸದೆ ಮಾಡುತ್ತೇವೆ. ಹಾಗಾದರೆ ನಾವು ಯಾವ ಕಾರಣಕ್ಕಾಗಿ ಆಂಗ್ಲ ಸರಕಾರದ ವಿರುದ್ಧ ಜಿಹಾದ್ ಮಾಡಿ ಇಸ್ಲಾಂ ತತ್ವಗಳ ವಿರುದ್ಧ ವಿನಾಕಾರಣ ಪಕ್ಷಗಳ ರಕ್ತ ಹರಿಸಬೇಕು. ಈ ಉತ್ತರವನ್ನು ಕೇಳಿದ ನಂತರ, ಪ್ರಶ್ನೆಗಾರನಿಗೆ ಮೌನವಾಯಿತು ಮತ್ತು ಜಿಹಾದ್‌ನ ನಿಜವಾದ ಉದ್ದೇಶ ಅರ್ಥವಾಯಿತು."
(ಸವಾನೆಹ್ ಅಹ್ಮದಿ ಕಲಾಂ, ಪುಟ–71)

ಮತ್ತು ಪುಟ 139 ರಲ್ಲಿ ಅವರು ಬರೆಯುತ್ತಾರೆ:

"ಸೈಯದ್ ಸಾಹಿಬ್ ಅವರು ಇಂಗ್ಲಿಷ್ ಸರ್ಕಾರದ ವಿರುದ್ಧ ಜಿಹಾದ್ ನಡೆಸುವ ಉದ್ದೇಶವನ್ನು ಹೊಂದಿರಲಿಲ್ಲ. ಅವರು ಈ ಸ್ವತಂತ್ರ ಅಭ್ಯಾಸವನ್ನು ತಮ್ಮ ಅಭ್ಯಾಸವೆಂದು ಪರಿಗಣಿಸಿದರು."

ಅವರ ಬಲಗೈ ಶಿಷ್ಯರಾದ ಹಝ್ರತ್ ಮೌಲಾನಾ ಮುಹಮ್ಮದ್ ಇಸ್ಮಾಯಿಲ್ ಶಹೀದ್(ರಹ) ಅವರು ಕಲ್ಕತ್ತಾದಲ್ಲಿ ತಂಗಿದ್ದಾಗ ಅವರು ಧರ್ಮೋಪದೇಶ ಮಾಡುವಾಗ ಇಂಗ್ಲಿಷ್ ಸರ್ಕಾರದ ವಿರುದ್ಧ ಜಿಹಾದ್ ನಡೆಸುವುದು ಸರಿಯೇ ಅಥವಾ ಇಲ್ಲವೇ? ಎಂದು ಕೇಳಲಾಯಿತು. ಅದಕ್ಕೆ ಅವರು ಪ್ರತಿಕ್ರಿಯೆಯಾಗಿ ಹೇಳಿದರು: "ಇಂತಹ ದ್ವೇಷರಹಿತ ಮತ್ತು ಪಕ್ಷಪಾತವಿಲ್ಲದ ಸರ್ಕಾರದ ವಿರುದ್ಧ ಜಿಹಾದ್ ನಡೆಸುವುದು ಸರಿಯಲ್ಲ."
(ಸವಾನೆಹ್ ಅಹ್ಮದಿ ಕಲಾಂ, ಪುಟ–57)

ಮತ್ತು ದಿವಂಗತ ಸರ್ ಸೈಯದ್ ಅಹ್ಮದ್ ಖಾನ್ ಅವರು "ರಿಸಾಲ ಬಗ್ಗಾವತೆ ಹಿಂದ್" ಸಂಕಲನದಲ್ಲಿ ಸಾಕ್ಷ್ಯಗಳಿಂದ 1857 ರ ದಂಗೆಯು ಜಿಹಾದ್ ಆಗಿರಲಿಲ್ಲ ಮತ್ತು ಮುಸ್ಲಿಮರು ಬ್ರಿಟಿಷ್ ಸರ್ಕಾರದ ವಿರುದ್ಧ ಜಿಹಾದ್ ನಡೆಸಲು ಕಾನೂನುಬದ್ಧವಾಗಿ ಅಧಿಕಾರ ಹೊಂದಿರಲಿಲ್ಲ ಎಂದು ಸಾಬೀತುಪಡಿಸಿದ್ದಾರೆ.

ಮೌಲವಿ ಮುಹಮ್ಮದ್ ಹುಸೇನ್ ಬಟಾಲ್ವಿ ಅವರು 1876 ರಲ್ಲಿ "ಅಲ್ ಇಖ್ತಿಸಾದ್ ಫೀ ಮಸಾಎಲಲ್ ಜಿಹಾದ್" ಎಂಬ ನಿಯತಕಾಲಿಕವನ್ನು ಬರೆದರು ಮತ್ತು ಅವರು ಇಸ್ಲಾಮಿಕ್ ವಿದ್ವಾಂಸರ ಅಭಿಪ್ರಾಯಗಳನ್ನು ಪಡೆಯಲು ಲಾಹೋರ್‌ನಿಂದ ಅಝೀಮಾಬಾದ್ ಮತ್ತು ಪಾಟ್ನಾಗೆ ಪ್ರಯಾಣಿಸಿದರು ಮತ್ತು ಈ ಪತ್ರಿಕೆಯನ್ನು ಇಸ್ಲಾಂನ ವಿವಿಧ ಪಂಥಗಳ ಮಹಾನ್ ವಿದ್ವಾಂಸರಿಗೆ ಈ ಪತ್ರಿಕೆ ಅಕ್ಷರಶಃ ಆಲಿಸಿಕೊಟ್ಟು ಅವರ ಅಭಿಪ್ರಾಯಗಳನ್ನು ಪಡೆದರು. ಅದರಲ್ಲಿ ಅವರು ಆ ಸಾಕ್ಷ್ಯಗಳ ವಿವರ ನೀಡುತ್ತಾ ಬರೆಯುತ್ತಾರೆ:

"ಕ್ರಿಶ್ಚಿಯನ್ ಸಾಮ್ರಾಜ್ಯದ ವಶದಲ್ಲಿದ್ದರೂ ಭಾರತ ದೇಶವು ದಾರುಲ್ ಇಸ್ಲಾಂ ಎಂದು ಈ ವಾದಗಳು ಸ್ಪಷ್ಟವಾಗಿ ಸಾಬೀತುಪಡಿಸುತ್ತವೆ. ಅರಬ್ ಅಥವಾ ಅಜಾಮೇತರ, ಮಹದಿ ಸುಡಾನಿ ಆಗಲಿ ಅಥವಾ ಹಝ್ರತ್ ಸುಲ್ತಾನ್ ಷಾ ಇರಾನಿ, ಖೊರಾಸಾನ್‌ನ ಅಮೀರ್ ಆಗಿರಲಿ, ಯಾವುದೇ ಅರಸನು ಧಾರ್ಮಿಕವಾಗಿ ಹೋರಾಡಲು ಸಂಪೂರ್ಣವಾಗಿ ಅನುಮತಿಸುವುದಿಲ್ಲ." (ಅಲ್‌ಇಖ್ತಿಸಾದ್, ಪಉಟ–16)

ಮತ್ತು ಅವರು ಬರೆಯುತ್ತಾರೆ: "ಭಾರತಕ್ಕಾಗಿ ಇಂಗ್ಲಿಷ್ ಸರ್ಕಾರದ ವಿರುದ್ಧ ಇಸ್ಲಾಂ ಧರ್ಮದ ಜನರು ವಿರೋಧಿಸಲು ಮತ್ತು ಬಂಡಾಯವೆದ್ದಲು ನಿಷೇಧಿಸಲಾಗಿದೆ." (ಇಶಾಅತ್ ಅಲ್–ಸುನ್ನಾ, ಸಂಪುಟ–6, ಸಂಖ್ಯೆ–10, ಪುಟ–187)

ಮತ್ತು ಬರೆಯುತ್ತಾರೆ. "ಇಂತಃ ಶಾಂತಿ ಸ್ವಾತಂತ್ರ್ಯ ಉತ್ತಮ ಆಡಳಿತ ಹೊಂದಿದ ಬ್ರಿಟಿಷ್ ಸರಕಾರದಿಂದ ಭಾರತಹ ಅಹ್ಲೆ ಹದೀನ್ ಈ ಸರಕಾರವನ್ನು ಉತ್ತಮ ಎಂದು ಭಾವಿಸುತ್ತದೆ. ಈ ಸರಕಾರದ ಪ್ರಜೆಗಳಾಗಿರುವುದು ಇಸ್ಲಾಮಿನ ಸರಕಾರದ ಪ್ರಜೆಗಲಾಗಿರುವುದಕ್ಕಿಂತ ಉತ್ತಮ ಎಂದು ಭಾವಿಸುತ್ತೇವೆ. ಅವರು ಎಲ್ಲಿ ಬೇಕಾದರೂ ಇರಲಿ ಮತ್ತು ಹೋಗಲಿ (ಅರಬರಲ್ಲಿ ಅಥವಾ ರೋಮಿನಲ್ಲಿ ಅಥವಾ ಇನ್ನೆಲ್ಲಿಯೂ) ಯಾವುದೇ ಇನ್ನೊಂದು ರಾಜ್ಯದ ಪ್ರಜೆಗಳಾಗಿರಲು ಇಚ್ಛಿಸುವುದಿಲ್ಲ.
(ಇಶಾಅತ್ ಅಲ್–ಸುನ್ನಾ, ನಂಖ್ಯೆ–10, ಸಂಪುಟ–6, ಪುಟ–293)

ಅದೇ ನಿಲುವು ನವಾಬ್ ಮೌಲ್ವಿ ಮುಹಮ್ಮದ್ ಸಿದ್ದೀಖ್ ಹಸನ್ ಖಾನ್ ಸಾಹಿಬ್ ಆಫ್ ಭೂಪಾಲ್ ಮತ್ತು ಮೌಲ್ವಿ ನಝೀರ್ ಹುಸೇನ್ ಮಹ್ದದಿಸಿ ದೇಹಲ್ವಿ ಅವರದ್ದಾಗಿತ್ತು ಮತ್ತು ಅದೇ ಫತ್ವಾ ಮೌಲ್ವಿ ರಶೀದ್ ಅಹ್ಮದ್ ಗಂಗೋಹಿ ಹಾಗೂ ಮೌಲ್ವಿ ಅಶ್ರಫ್ ಅಲಿ ಥಾನ್ವಿ ಇನ್ನಿತರರು ನೀಡಿದರು. ಮತ್ತು ಅದೇ ನಿಲುವು ಮೌಲ್ವಿ ಅಬ್ದುಲ್ ಅಝೀಝ್ ಮತ್ತು ಮೌಲ್ವಿ ಮುಹಮ್ಮದ್ ಮುಫ್ತಿ ಲುಧಿಯಾನ ಅವರದ್ದಾಗಿತ್ತು: "ಬ್ರಿಟಿಷ್ ಸರಕಾರದ ವಿರುದ್ಧ ಮುಸಲ್ಮಾನರಿಗೆ ಹೋರಾಡುವುದು ಶರೀಅತ್ ಪ್ರಕಾರ ನಿಷಿದ್ಧವಿದೆ." (ನುಸ್ರತುಲ್ ಬ್ರಾರ್, ಮೌಲವಿ ಮುಹಮ್ಮದ್ ಮುಫ್ತಿ ಲುಧಿಯಾನ, 1306 ಹಿಜರಿ)

*(ಪುಟ ಸಂಖ್ಯೆ–10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಪಾಪದಿಂದ ನಿಜವಾದ ಪಶ್ಚಾತ್ತಾಪ ಮಾಡುವವನು ಯಾವುದೇ ಪಾಪವನ್ನು ಮಾಡದೇ ಇರುವವನ ಹಾಗೆಯೇ ಆಗಿರುವನು. (ಹದೀಸ್)

ಇಸ್ತಿಗ್ಫಾರ್ ಮತ್ತು ತೌಬದ ಕುರಿತು ಹಝ್ರತ್ ಮಸೀಹ್ ಮೌಊದ್(ಅ) ಪದೇ ಪದೇ ನಮ್ಮ ಗಮನವನ್ನು ಸೆಳೆದಿರುವರು.

ಪಾಪದ ಕುರಿತು ನಾಚಿಕೆಪಡುವುದು ಮತ್ತು ಲಜ್ಜೆ ಉಂಟಾಗುವುದು ತೌಬದ ಲಕ್ಷಣವಾಗಿದೆ ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು.

ನಾವು ಯಾವಾಗಲೂ ಸರ್ವಶಕ್ತನಾದ ಅಲ್ಲಾಹನಿಂದ ಕ್ಷಮೆಯನ್ನು ಕೋರುವ ಮೂಲಕ ನಮ್ಮ ಹೃದಯವನ್ನು ಶುದ್ಧೀಕರಿಸಲು ಪ್ರಯತ್ನಿಸಬೇಕು.

ಆಧ್ಯಾತ್ಮಿಕ ಮಗ್ದರ್ ಇಸ್ತಿಗ್ಫಾರ್ (ಕ್ಷಮೆ) ಆಗಿದೆ. ಅದರೊಂದಿಗೆ, ಆತ್ಮವು ಶಕ್ತಿಯನ್ನು ಪಡೆಯುತ್ತದೆ ಮತ್ತು ಹೃದದಲ್ಲಿ ಸ್ಥಿರತೆಯನ್ನು ಹುಟ್ಟುತ್ತದೆ. ಯಾರು ಶಕ್ತಿ ಪಡೆಯಲು ಆಶಿಸುತ್ತಾನೊ ಆತನು ಇಸ್ತಿಗ್ಫಾರ್ (ಕ್ಷಮೆ) ಯನ್ನು ಕೇಳಬೇಕು

ಮನುಷ್ಯನು ಈ ಸತ್ಯಪರತೆ ಮತ್ತು ದೃಢಸಂಕಲ್ಪದೊಂದಿಗೆ ಅಲ್ಲಾಹನ ಕಡೆಗೆ ಮರಳುವಾಗ ದಯಾವಂತನೂ ಕಾರುಣ್ಯವಂತನೂ ಆದ ಅಲ್ಲಾಹನು ಆತನ ಪಾಪದ ಶಿಕ್ಷೆಯನ್ನು ಕ್ಷಮಿಸುತ್ತಾನೆ. ತೌಬವನ್ನು ಸ್ವೀಕಾರ ಮಾಡಿಕೊಂಡು ನಾಶದಿಂದ ರಕ್ಷಿಸುವುದು ಅಲ್ಲಾಹನ ಉನ್ನತ ಗುಣಗಳಲ್ಲಿ ಒಂದಾಗಿದೆ

ಈಗ ಲೋಕದಲ್ಲಿ ಯುದ್ಧದ ಪರಿಸ್ಥಿತಿಯಿದೆ. ಈ ಅವಸ್ಥೆಯಲ್ಲಿ ಲೋಕವನ್ನು ಮತ್ತು ಸ್ವತಃ ನಮ್ಮನ್ನು ಸುರಕ್ಷಿತವಾಗಿರಿಸಲು ಅಹ್ಮದಿಯರು ಬಹಳವಾಗಿ ಇಸ್ತಿಗ್ಫಾರ್ ಮಾಡಬೇಕು.

ವಿಪತ್ತು ಬಹಿರಂಗಗೊಳ್ಳುವ ಮೊದಲು ಪ್ರಾರ್ಥಿಸುವುದನ್ನು ಮುಂದುವರಿಸುತ್ತಾ ಇರಬೇಕು ಮತ್ತು ಕ್ಷಮೆಯನ್ನು ಕೇಳಬೇಕು. ಈ ರೀತಿಯಾಗಿ ಅಲ್ಲಾಹನು ವಿಪತ್ತಿನ ಸಮಯದಲ್ಲಿ ರಕ್ಷಿಸುತ್ತಾನೆ.

ಬೈಅತ್ ಮಾಡಿದ ನಂತರ ಅನ್ಯರಿಗೂ ಮತ್ತು ಸ್ವಂತ ಸಂಬಂಧಿಕರಿಗೂ ಎಂತಹ ಮಾದರಿಯನ್ನು ತೋರಿಸಬೇಕು ಎಂದರೆ, ಈತ ಹಿಂದೆ ಇದ್ದ ಹಾಗೆ ಈಗ ಇಲ್ಲವೆಂದು ಅವರು ಹೇಳುವಂತಾಗಬೇಕು. ಇದೇ ಯಥಾರ್ಥ ಇಸ್ತಿಗ್ಫಾರಿನ ಪರಿಣಾಮವಾಗಿರಬೇಕು.

ಅಲ್ಲಾಹನನ್ನು ಭಯಪಡುವುದು ಮತ್ತು ಮುತ್ತಖಿ ಆಗುವುದು ಬಹಳ ದೊಡ್ಡ ಸಂಗತಿಯಾಗಿದೆ. ಭಗವಂತನು ಅದರ ಮೂಲಕ ಸಾವಿರಾರು ಆಪತ್ತುಗಳಿಂದ ರಕ್ಷಿಸುತ್ತಾನೆ

ತನ್ನ ಹಿಂದಿನ ಅಪರಾಧಗಳು ಮತ್ತು ಪಾಪಗಳ ಶಿಕ್ಷೆಯಿಂದ ಸರ್ವಶಕ್ತನಾದ ಅಲ್ಲಾಹನಿಂದ ರಕ್ಷಣೆ ಪಡೆಯಲು ಬಯಸಬೇಕು ಮತ್ತು ಭವಿಷ್ಯದ ಪಾಪಗಳ ಆಯೋಗದಿಂದ ರಕ್ಷಣೆ ಪಡೆಯಲು ಕೇಳಿಕೊಳ್ಳಬೇಕು

ದೇವನ ಆರಾಧಕ ಎಂಬುದನ್ನು ವ್ಯಕ್ತಪಡಿಸಲಿಕ್ಕಾಗಿ ಹಝ್ರತ್ ಪೈಗಂಬರ್(ಸ) ಕೂಡ ಸ್ವಂತ ಸಂರಕ್ಷಣೆಗಾಗಿ ಇತರ ಪ್ರವಾದಿಗಳ ಹಾಗೆ ಅಲ್ಲಾಹನೊಡನೆ ಯಾಚಿಸುತ್ತಿದ್ದರು

ಆರಾಧನೆಯ ಗುಣಮಟ್ಟವನ್ನು ಪಡೆಯಲು ಇಸ್ತಿಗ್ಫಾರ್ ಬಹಳ ಮುಖ್ಯವಾಗಿದೆ

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳ ಬೆಳಕಿನಲ್ಲಿ ತೌಬ ಮತ್ತು ಇಸ್ತಿಗ್ಫಾರಿನ ಯಥಾರ್ಥ ತಾತ್ಪರ್ಯದ ಬಗ್ಗೆ ವಿಶ್ವಾಸವರ್ಧಕ ಪ್ರಸ್ತಾವನೆ**

ನಾಲ್ಕು ದಿವಂಗತರಾದ ಹಝ್ರತ್ ಮೀರ್ ಮುಹಮ್ಮದ್ ಇಸ್‌ಹಾಖ್ ಸಾಹಿಬ್ ಅವರ ಪುತ್ರಿಯಾದ ಮುಕರ್ರಮ ಆನ್ಸಾ ಬೇಗಂ ಸಾಹಿಬಾ, ಮುಕರ್ರಮಾ ಬುಶ್ರಾ ಇಕ್ರಾಮ್ ಸಾಹಿಬಾ ಆಫ್ ಸಿಯಾಲ್ಕೋಟ್, ಮುಕರ್ರಮ ಮಸರ್ರತ್ ಜಹಾಂ ಸಾಹಿಬಾ ಆಫ್ ಆಸ್ಟ್ರೇಲಿಯಾ ಮತ್ತು ಮುಕರ್ರಮ್ ನಾಸಿರ್ ಅಹ್ಮದ್ ಖುರೈಷಿ ಸಾಹಿಬ್ ಆಫ್ ಅಮೇರಿಕಾ ರವರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝು ಜನಾಝು ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೊರ್ಡ್, ಯು.ಕೆ ಯ **'ಮಸ್ಜಿದ್ ಇಸ್ಲಾಮಬಾದ್'** ನಿಂದ **25-08-2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಅಲ್ಲಾಹನು ತನ್ನ ದಾಸರ ಕ್ಷಮೆಯಾಚನೆ (ಇಸ್ತಿಗ್ಫಾರ್) ಮತ್ತು ಪಶ್ಚಾತ್ತಾಪವನ್ನು (ತೌಬ) ಸ್ವೀಕಾರ ಮಾಡುವವನಾಗಿದ್ದಾನೆ. ಆದರೆ ಅದಕ್ಕೆ ಇರುವ ನಿಬಂಧನೆ ಏನೆಂದರೆ, ಅದು ನಿಜವಾದ ತೌಬ ಆಗಿರಬೇಕು. ಕೇವಲ ಬಾಯಿಮಾತಾಗಿರಬಾರದು. ನಿಜವಾಗಿಯೂ ತೌಬ ಮಾಡುವವರಿಗೆ ಅಲ್ಲಾಹನು ಸಂಪತ್ತು ಮತ್ತು ಮಕ್ಕಳನ್ನು ದಯಪಾಲಿಸುವನು ಎಂದು ಪವಿತ್ರ ಖುರ್‌ಆನಿನ ವಿವಿಧ ಎಡೆಗಳಲ್ಲಿ ಪ್ರಸ್ತಾಪಿಸಲಾಗಿದೆ. (ಅನ್ನೂಹ್: 13) ಇದು ದೈವಿಕ ಶಿಕ್ಷೆಯಿಂದ ರಕ್ಷಣೆ ಪಡೆಯಲು ಇರುವ ಒಂದು ಮಾರ್ಗವಾಗಿದೆ. ಇಸ್ತಿಗ್ಫಾರ್ ಮಾಡುವವನು ಅಲ್ಲಾಹನ ಕಾರುಣ್ಯವನ್ನು ಸೆಳೆಯುವವನಾಗುತ್ತಾನೆ. ಇಸ್ತಿಗ್ಫಾರ್ ಮಾಡುವವರಿಗೆ ಸುವಾರ್ತೆ ನೀಡುತ್ತಾ ಅಲ್ಲಾಹನು ಒಂದೆಡೆ ಹೇಳುತ್ತಾನೆ: **ಲವಜದುಲ್ಲಾಹ ತವ್ವಾಬರ್ರಹೀಮಾ.** ಎಂದರೆ, ಅತಿ ಹೆಚ್ಚು ಕ್ಷಮಿಸುವವನೂ ಕಾರುಣ್ಯನಿಧಿಯೂ ಆಗಿ ಅಲ್ಲಾಹನನ್ನು

ಅವರು ಖಂಡಿತವಾಗಿಯೂ ಕಾಣುವರು. ಆದರೆ ಯಥಾರ್ಥ ಇಸ್ತಿಗ್‌ಫಾರ್ ಮತ್ತು ನಿಜವಾದ ತೌಬ ಆಗಿರಬೇಕು ಎಂಬುದೇ ಅದರ ಶರತ್ತು. ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಹಝ್ರತ್ ಅನಸ್(ರ) ಹೀಗೆ ವರದಿ ಮಾಡುತ್ತಾರೆ: ಪಾಪದಿಂದ ನಿಜವಾದ ಪಶ್ಚಾತ್ತಾಪ ಮಾಡುವವನು ಯಾವುದೇ ಪಾಪವನ್ನು ಮಾಡದೇ ಇರುವವನ ಹಾಗೆಯೇ ಆಗಿರುವನು.

ಅಲ್ಲಾಹನು ಯಾವನಾದರೂ ವ್ಯಕ್ತಿಯನ್ನು ಪ್ರೀತಿಸುವಾಗ ಪಾಪವು ಆತನಿಗೆ ಯಾವುದೇ ನಷ್ಟವನ್ನು ಉಂಟುಮಾಡಲು ಸಾಧ್ಯವಲ್ಲ. ಎಂದರೆ ಪಾಪದ ಪ್ರೇರಣೆಗಳಿಗೆ ಆತನನ್ನು ಪಾಪದ ಕಡೆಗೆ ಸೆಳೆಯಲು ಸಾಧ್ಯವಲ್ಲ ಮತ್ತು ಕೆಡುಕಿನ ದುಷ್ಪರಿಣಾಮಗಳಿಂದ ಅಲ್ಲಾಹನು ಆತನನ್ನು ಸಂರಕ್ಷಿಸುವನು. ನಂತರ ಹಝ್ರತ್ ಪೈಗಂಬರ್(ಸ)ರವರು ಈ ಆಯತ್ ಅನ್ನು ಪ್ರಸ್ತಾಪಿಸಿದರು ಅಂದರೆ **ಇನ್ನಲ್ಲಾಹ ಯುಹಿಬ್ಬುತ್ತವ್ವಾಬೀನ ವ ಯುಹಿಬ್ಬುಲ್ ಮುತತಹ್ಹಿರೀನ್** (ಅಲ್‌ಬಖರ:223) ಸರ್ವಶಕ್ತನಾದ ಅಲ್ಲಾಹನು ಪಶ್ಚಾತ್ತಾಪ (ತೌಬ) ಪಡುವವರನ್ನು ಮತ್ತು ಪರಿಶುದ್ಧರಾಗಿರುವವರನ್ನು ಇಷ್ಟಪಡುತ್ತಾನೆ. ಆಗ ಹಝ್ರತ್ ಪೈಗಂಬರ್(ಸ)ರವರನ್ನು ಹೇಳಲಾಯಿತು ಯಾ ರಸೂಲಲ್ಲಾಹ್!! ತೌಬದ ಲಕ್ಷಣವೇನು? ಸರಿಯಾಗಿ ತೌಬ ಆಗಿದೆಯೋ ಇಲ್ಲವೊ ಎಂಬುದರ ಬಗ್ಗೆ ಹೇಗೆ ತಿಳಿಯುತ್ತದೆ? ಪಾಪದ ಕುರಿತು ನಾಚಿಕೆಪಡುವುದು ಮತ್ತು ಲಜ್ಜೆ ಉಂಟಾಗುವುದು ತೌಬದ ಲಕ್ಷಣವಾಗಿದೆ ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. (ಕನ್‌ಝುಲ್ ಅಲ್‌ಮಾಲ್, ಭಾಗ-4, ಪುಟ-261, ಕಿತಾಬುತ್ತೌಬ, ಹದೀಸ್-10428, ಮುಅಸ್ಸರಿಸಾಲ ಬೈರೂತ್ 1985)

ಒಟ್ಟಿನಲ್ಲಿ ಯಥಾರ್ಥವಾದ ತೌಬ ಮಾಡುವವನು ಪಾಪಗಳಿಂದ ವಿಮುಕ್ತನಾಗುತ್ತಾನೆ ಮತ್ತು ಆತನಿಗೆ ಅಲ್ಲಾಹನ ಪ್ರೀತಿಯೂ ಲಭಿಸುತ್ತದೆ ಹಾಗೂ ಪದೇ ಪದೇ ಅಲ್ಲಾಹನ ಕಾರುಣ್ಯದಿಂದ ಪಾಲು ಪಡೆಯುತ್ತಾನೆ. ನಿಜವಾದ ತೌಬದ ಕುರಿತು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಕೆಟ್ಟ ಆಲೋಚನೆಗಳು ಹಾಗೂ ಕೆಟ್ಟ ಭಾವನೆಗಳನ್ನು ಹಾಗೂ ಕೆಟ್ಟ ಕಲ್ಪನೆಗಳನ್ನು ಉಪೇಕ್ಷಿಸಬೇಕು ಎಂಬುದಾಗಿದೆ ಮೊದಲ ಷರತ್ತಾಗಿದೆ. ಆದ್ದರಿಂದ, ತಪ್ಪು ಆಲೋಚನೆಗಳಿಗೆ ಕಾರಣವೆಂದು ಪರಿಗಣಿಸಬಹುದಾದ ಆಲೋಚನೆಗಳನ್ನು ಸಂಪೂರ್ಣವಾಗಿ ತ್ಯಜಿಸಬೇಕು. ಇದು ಒಬ್ಬ ವ್ಯಕ್ತಿಯು ಮಾಡಬೇಕಾದ ಮಹಾನ್ ಜಿಹಾದ್ ಆಗಿದೆ, ಆಗ ಅವನು ಪಶ್ಚಾತ್ತಾಪದ ಕಡೆಗೆ ಹೆಜ್ಜೆ ಹಾಕುತ್ತಾನೆ. ಎರಡನೇ ನಿಬಂಧನೆ, ನಿಜವಾದ ಲಜ್ಜೆ ಮತ್ತು ನಾಚಿಕೆ ಉಂಟಾಗಬೇಕು. ಈ ಅನುಭೂತಿಗಳು ಮತ್ತು ಲೌಕಿಕವಾದ ರುಚಿಗಳು ತಾತ್ಕಾಲಿಕ ಸಂಗತಿಗಳಾಗಿವೆ ಎಂದು ಯೋಚಿಸಬೇಕು. ಪ್ರತಿದಿನ ಅದರಲ್ಲಿ ಕೊರತೆಯುಂಟಾಗುತ್ತಾ ಹೋಗುತ್ತವೆ. ಹೀಗಿರುವಾಗ ಅದರೊಂದಿಗೆ ಮನುಷ್ಯನು ಏಕೆ ಅಂಟಿಕೊಂಡಿರಬೇಕು ಎಂದು ಚಿಂತಿಸಬೇಕು. ಈ ಸತ್ಯವನ್ನು ಅರಿತುಕೊಂಡು ತೌಬ ಮಾಡುವವನು ಸೌಭಾಗ್ಯಶಾಲಿ. ಇದು ಹಝ್ರತ್ ಪೈಗಂಬರ್(ಸ) ಹೇಳಿದ ನಿಜವಾದ ಪಶ್ಚಾತ್ತಾಪವಾಗಿದೆ. ಮತ್ತು ಮೂರನೇ ಷರತ್ತು ಎಂದರೆ ಆ ಕೆಡುಕುಗಳ ಸಮೀಪಕ್ಕೆ ಹೋಗಲಾರೆನು ಎಂದು ದೃಢಸಂಕಲ್ಪ ಮಾಡಬೇಕು. ಕೆಡುಕುಗಳ ಸಮೀಪಕ್ಕೆ ಹೋಗುವುದಿಲ್ಲ ಎಂದು ಪ್ರತಿಜ್ಞೆ ಮಾಡಿಕೊಂಡು ಅಷ್ಟಕ್ಕೆ ಸಾಕು ಮಾಡುಬಾರದು. ಬದಲಾಗಿ ಉತ್ತಮ ಸ್ವಭಾವಗಳು ಮತ್ತು ಪರಿಶುದ್ಧ ಕೃತ್ಯಗಳು ಅವುಗಳ ಜಾಗವನ್ನು ಪಡೆಯಬೇಕು. (ಮಲ್‌ಫೂಝಾತ್, ಸಂಪುಟ-1, ಪುಟ-138-139, 1984) ಒಟ್ಟಿನಲ್ಲಿ ಇದಾಗಿದೆ ನಿಜವಾದ ತೌಬ ಮತ್ತು ಯಥಾರ್ಥ ಲಜ್ಜೆ. ಈ ಸ್ಥಿತಿಯನ್ನು ಪಡೆದರೆ ಅಂತಹ ದಾಸರನ್ನು ಅಲ್ಲಾಹನು ಪ್ರೀತಿಸುತ್ತಾನೆ.

ಇಸ್ತಿಗ್‌ಫಾರ್ ಮತ್ತು ತೌಬದ ಕುರಿತು ಹಝ್ರತ್ ಮಸೀಹ್ ಮೌಊದ್(ಅ) ಪದೇ ಪದೇ ನಮ್ಮ ಗಮನವನ್ನು ಸೆಳೆದಿರುವರು.

ಮನುಷ್ಯನು ತಪ್ಪುಗಳನ್ನು ಮಾಡುತ್ತಾನೆ ಮತ್ತು ಈ ತಪ್ಪುಗಳು ಮತ್ತೆ ಮತ್ತೆ ಪುನರಾವರ್ತನೆಯಾದಾಗ, ಒಂದರ ನಂತರ ಒಂದರಂತೆ ಅವನು ಮತ್ತೊಂದು ಪಾಪದಲ್ಲಿ ತೊಡಗಿಕೊಳ್ಳುತ್ತಾನೆ. ಆದ್ದರಿಂದ, ನಾವು ಯಾವಾಗಲೂ ಸರ್ವಶಕ್ತನಾದ ಅಲ್ಲಾಹನಿಂದ ಕ್ಷಮೆಯನ್ನು ಕೋರುವ ಮೂಲಕ ನಮ್ಮ ಹೃದಯವನ್ನು ಶುದ್ಧೀಕರಿಸಲು ಪ್ರಯತ್ನಿಸಬೇಕು. ಮತ್ತು ಅಲ್ಲಾಹನ ಹಕ್ಕುಗಳನ್ನು ಮತ್ತು ದಾಸರ ಹಕ್ಕುಗಳನ್ನು ಎಂದಿಗೂ ವ್ಯರ್ಥವಾಗಬಾರದು ಎಂದು ಯಾವಾಗಲೂ ಚಿಂತಿಸುತ್ತಿರಬೇಕು.

ನಾನು ಹೇಳಿದಂತೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಕ್ಷಮೆ ಮತ್ತು ಪಶ್ಚಾತ್ತಾಪವನ್ನು ಪಡೆಯಲು ಜಮಾಅತ್ತನ್ನು ಪದೇ ಪದೇ ನಿರ್ದೇಶಿಸಿದ್ದಾರೆ. ಅವರಿಗೆ ಇದರ ಬಗ್ಗೆ ಎಷ್ಟು ಚಿಂತೆ ಇತ್ತು ಎಂದರೆ, ಇದರ ಕುರಿತು ಜಮಾಅತಿನ ಗಮನ ಸೆಳೆಯದ ಯಾವುದೇ ಸಂದರ್ಭ ಇದ್ದಿರಲಿಲ್ಲ. ಅವರ ಸಭೆಗಳಲ್ಲಿ ಅವರ ಬರಹಗಳಲ್ಲಿ ಪದೇ ಪದೇ ಗಮನ ಸೆಳೆದರು. ಆದ್ದರಿಂದ ಬೈಅತ್ತಿನ ಹಕ್ಕುಗಳನ್ನು ಈಡೇರಿಸುವವರಾಗಲು ನಾವು ಅಲ್ಲಾಹನ ಮತ್ತು ಅವನ ಪ್ರವಾದಿಯ ಆದೇಶಗಳು ಹಾಗೂ ನಿರ್ದೇಶನಗಳ ಬೆಳಕಿನಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರ ನಿರ್ದೇಶನಗಳನ್ನು ಸದಾ ನಮ್ಮ ಮುಂದಿರಿಸಿಕೊಂಡು ಅವುಗಳನ್ನು ಪಾಲಿಸಲು ಪ್ರಯತ್ನಿಸುವುದು ಬಹಳ ಅಗತ್ಯ.

ನಾವು ನಮ್ಮೊಳಗೆ ಶುದ್ಧ ಬದಲಾವಣೆಯನ್ನು ಸೃಷ್ಟಿಸದಿದ್ದರೆ ಮತ್ತು ನಿಜವಾದ ಪಶ್ಚಾತ್ತಾಪ ಮತ್ತು ಕ್ಷಮೆಯ ಕಡೆಗೆ ಗಮನ ಕೊಡದಿದ್ದರೆ, ಸ್ವಯಂ ಸುಧಾರಣೆಗೆ ನಮ್ಮ ವಾಗ್ದಾನವು ನಮಗೆ ಯಾವುದೇ ಒಳ್ಳೆಯದನ್ನು ಮಾಡಲಾರದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಅನೇಕ ಸ್ಥಳಗಳಲ್ಲಿ ಪಶ್ಚಾತ್ತಾಪದ ಬಗ್ಗೆ ವಿವರಿಸಿದ್ದಾರೆ. ಅದರಲ್ಲಿ ನಾನು ಕೆಲವು ಉಲ್ಲೇಖಗಳನ್ನು ಪ್ರಸ್ತುತಪಡಿಸುತ್ತೇನೆ.

ಇಸ್ತಿಗ್‌ಫಾರ್‌ನ (ಕ್ಷಮೆ) ಪ್ರಯೋಜನವೇನು? ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: **"ವನಿಸ್ತಗ್‌ಫರೂ ರಬ್ಬಕುಮ್ ಸುಮ್ಮ ತೂಬೂ ಇಲೈಹಿ** (ಹೂದ್:4) ಅಂದರೆ: ನಿಮ್ಮ ಪ್ರಭುವಿನಿಂದ ನೀವು ಕ್ಷಮೆ ಯಾಚಿಸಿರಿ ಮತ್ತು ಪಶ್ಚಾತ್ತಾಪಪಟ್ಟು ಅವನೆಡೆಗೆ ಮರಳಿರಿ. ಈ ಉಮ್ಮತ್ತಿಗೆ ಎರಡು ವಿಷಯಗಳನ್ನು ನೀಡಲಾಗಿದೆ ಎಂಬುದನ್ನು ನೆನಪಿಡಿ. ಒಂದು ಶಕ್ತಿ ಪಡೆಯಲು, ಇನ್ನೊಂದು ಗಳಿಸಿದ ಶಕ್ತಿಯನ್ನು ಆಚರಣೆಯಲ್ಲಿ ಪ್ರದರ್ಶಿಸಲು. ಶಕ್ತಿಯನ್ನು ಪಡೆಯಲು ಇಸ್ತಿಗ್ಫಾರ್ ಇದೆ, ಅದನ್ನು ಇಸ್ತಮ್‌ದಾದ್ ಮತ್ತು ಇಸ್ತಿಆನತ್ ಎಂದೂ ಕರೆಯುತ್ತಾರೆ." ಅಲ್ಲಾಹನಿಂದ ಸಹಾಯವನ್ನು ಯಾಚಿಸುವುದು. ಸೂಫಿಯಾರವರು ಬರೆದಿದ್ದಾರೆ: ವ್ಯಾಯಾಮ ಮಾಡುವುದರಿಂದ ಉದಾಹರಣೆಗೆ ಮುಗ್ದರ್‌ಗಳು ಹಾಗೂ ಮುಗ್ರಿಗಳನ್ನು (ವ್ಯಾಯಾಮ ಮಾಡುವುದಕ್ಕೆ ಉಪಯೋಗಿಸುವ ವಜೆಯಾದ ಮರಗಳ ತುಂಡು) ಎತ್ತುವುದು ಮತ್ತು ಅದನ್ನು ತಿರಿಗಿಸುವುದರಿಂದ ದೈಹಿಕ ಶಕ್ತಿ ದೃಢಗೊಳ್ಳುತ್ತದೆ." ವೇಟ್ ಲಿಫ್ಟಿಂಗ್ ತೂಕವನ್ನು ಎತ್ತುವವರು, ಭಾರ ಎತ್ತುವ, ಡಂಬೆಲ್ಲಗಳನ್ನು ಎತ್ತುವವರು, ವಿವಿಧ ರೀತಿಯ ವ್ಯಾಯಾಮಗಳನ್ನು ಮಾಡುವವರು, ಹೇಗೆ ಅವರ ವ್ಯಾಯಾಮದಿಂದ ದೈಹಿಕ ಶಕ್ತಿಯು ಹೆಚ್ಚಾಗುತ್ತದೆಯೊ. ಅದೇ ರೀತಿಯಲ್ಲಿ ಆಧ್ಯಾತ್ಮಿಕ ಮಗ್ದರ್ ಕ್ಷಮೆಯಾಗಿದೆ. ಅದರೊಂದಿಗೆ, ಆತ್ಮವು ಶಕ್ತಿಯನ್ನು ಪಡೆಯುತ್ತದೆ ಮತ್ತು ಹೃದದಲ್ಲಿ ಸ್ಥಿರತೆಯನ್ನು ಹುಟ್ಟುತ್ತದೆ. ಯಾರು ಶಕ್ತಿ ಪಡೆಯಲು ಆಶಿಸುತ್ತಾನೊ ಆತನು ಇಸ್ತಿಗ್ಫಾರ್ ಕ್ಷಮೆಯನ್ನು ಕೇಳಬೇಕು."

ನೀವು ಶಕ್ತಿಯನ್ನು ಪಡೆಯಲು ಬಯಸಿದರೆ, ಕ್ಷಮೆಯನ್ನು ಕೇಳಿರಿ. ಮುಚ್ಚುವುದಕ್ಕೆ ಮತ್ತು ಒತ್ತುವುದಕ್ಕೆ ಗಫರ ಎನ್ನುತ್ತಾರೆ. ಇಸ್ತಿಗ್ಫಾರ್ ಮೂಲಕ, ಮನುಷ್ಯನು ಸರ್ವಶಕ್ತನಾದ ಅಲ್ಲಹನಿಂದ ಅವನನ್ನು ತಡೆಯುವ ಭಾವನೆಗಳನ್ನು ಮತ್ತು ಆಲೋಚನೆಗಳನ್ನು ಮುಚ್ಚಿಡಲು ಮತ್ತು ನಿಗ್ರಹಿಸಲು ಪ್ರಯತ್ನಿಸುತ್ತಾನೆ. ಆದ್ದರಿಂದ, ಇದು ಇಸ್ತಿಗ್ಫಾರ್‌ನ ಅರ್ಥವಾಗಿದೆ, ಇದು ಮಾನವನ ಮೇಲೆ ಆಕ್ರಮಣ ಮಾಡಿ ಕೊಲ್ಲಲು ಬಯಸುವ ವಿಷಗಳು ಅವುಗಳನ್ನು ಜಯಿಸಿ ಮತ್ತು ಸರ್ವಶಕ್ತನಾದ ಅಲ್ಲಾಹನ ಆಜ್ಞೆಗಳನ್ನು ಪೂರೈಸುವ ಮಾರ್ಗದಲ್ಲಿನ ಅಡೆತಡೆಗಳನ್ನು ತಪ್ಪಿಸುವ ಮೂಲಕ ಪ್ರಾಯೋಗಿಕ ಬಣ್ಣದಲ್ಲಿ ತೋರಿಸುತ್ತವೆ. ಅಲ್ಲಾಹನು ಮನುಷ್ಯನಲ್ಲಿ ಎರಡು ರೀತಿಯ ಪದಾರ್ಥಗಳನ್ನು ಇಟ್ಟಿದ್ದಾನೆ ಎಂಬುದನ್ನೂ ನೆನಪಿನಲ್ಲಿಡಬೇಕು. ಒಂದು ಸಮ್ಮಿ ವಸ್ತು ಅಂದರೆ ವಿಷಕಾರಿ ವಸ್ತು, ಅದರ ಗ್ರಾಹಕ ಸೈತಾನನಾಗಿದ್ದಾನೆ, ಮತ್ತು ಇನ್ನೊಂದು ಪ್ರತ್ಯೌಷಧಿಯ ವಸ್ತುವಾಗಿದೆ. ಒಬ್ಬ ಮನುಷ್ಯನು ದುರಹಂಕಾರಿಯಾಗಿದ್ದಾಗ ಮತ್ತು ತನ್ನನ್ನು ಏನನ್ನೂ ಯೋಚಿಸಿದಾಗ ಮತ್ತು ಪ್ರತ್ಯೌಷಧಿಯ ಕಾರಂಜಿಯಿಂದ ಸಹಾಯವನ್ನು ತೆಗೆದುಕೊಳ್ಳದಿದ್ದರೆ, ವಿಷಕಾರಿ ಶಕ್ತಿಯು ಮೇಲುಗೈ ಸಾಧಿಸುತ್ತದೆ." ವಿಷಕಾರಿ ವಸ್ತುವು ಮೇಲುಗೈ ಸಾಧಿಸುತ್ತದೆ. "ಆದರೆ ಅವನು ತನ್ನನ್ನು ಕೀಳಾಗಿ ಪರಿಗಣಿಸಿದರೆ ಮತ್ತು ತನ್ನಲ್ಲಿ ಸರ್ವಶಕ್ತನಾದ ಅಲ್ಲಾಹನ ಸಹಾಯದ ಅಗತ್ಯವನ್ನು ಅನುಭವಿಸಿದಾಗ ಆ ಸಮಯದಲ್ಲಿ ಅಲ್ಲಾಹನಿಂದ ಒಂದು ಕಾರಂಜಿಯನ್ನು ರಚಿಸಲಾಗುತ್ತದೆ ಅದರಿಂದ ಆತನ ಆತ್ಮವು ಮೃದುವಾಗಿ ಹರಿಯುತ್ತದೆ ಮತ್ತು ಇದು ಇಸ್ತಿಗ್ಫಾರ್ನ ಅರ್ಥವಾಗಿದೆ. ಅಂದರೆ, ಈ ಶಕ್ತಿಯನ್ನು ಪಡೆದು ವಿಷಪೂರಿತ ವಸ್ತುವನ್ನು ಜಯಿಸುವುದು. ಇದು ನಿಜವಾದ ಕ್ಷಮೆಯಾಗಿದೆ. ಆದುದರಿಂದ, ನೀವು ಆರಾಧನೆಯಲ್ಲಿ ದೃಢವಾಗಿ ಉಳಿಯಬೇಕು ಎಂಬುದು ಇದರ ಅರ್ಥ. ಮೊದಲ ಸಂದೇಶವಾಹಕರನ್ನು ಅನುಸರಿಸಿರಿ. ಎರಡನೇಯದಾಗಿ ಎಲ್ಲಾ ಸಮಯದಲ್ಲೂ ಅಲ್ಲಾಹನಿಂದ ಸಹಾಯವನ್ನು ಯಾಚಿಸಿರಿ. ಹೌದು, ಮೊದಲು ನಿಮ್ಮ ಭಗವಂತನಿಂದ ಸಹಾಯ ಪಡೆಯಿರಿ. ನೀವು ಶಕ್ತಿಯನ್ನು ಪಡೆದಾಗ, **ತೂಬೂ ಇಲೈಹಿ** (ಹೂದ್: 4) ಅಂದರೆ ಅಲ್ಲಾಹನ ಕಡೆಗೆ ತಿರುಗಿ. (ಮಲ್‌ಫೂಝಾತ್, ಸಂಪುಟ-2, ಪುಟ-67-68, 1984)

ನಂತರ ಹಝ್ರತ್ ಮಸೀಹ್ ಮೌಊದ್(ಅ) ಅವರು ಹೇಳಿದರು: "ನಿಸ್ಸಂಶಯವಾಗಿ, ಮನುಷ್ಯನು ಅವನ ಸ್ವಭಾವದಲ್ಲಿ ತುಂಬಾ ದುರ್ಬಲನಾಗಿದ್ದಾನೆ ಮತ್ತು ಸರ್ವಶಕ್ತನಾದ ಅಲ್ಲಾಹನ ನೂರಾರು ಆಜ್ಞೆಗಳ ಭಾರವನ್ನು ಅವನ ಮೇಲೆ ಇರಿಸಲಾಗಿದೆ." ಮನುಷ್ಯ ದುರ್ಬಲನು, ಆದರೆ

ಸರ್ವಶಕ್ತನಾದ ಅಲ್ಲಾಹನು ಅನೇಕ ಆಜ್ಞೆಗಳನ್ನು ನೀಡಿದ್ದಾನೆ, ಅದು ಪ್ರಕೃತಿಯಲ್ಲಿ ಅಂತರ್ಗತವಾಗಿರುತ್ತದೆ. ಅವನ ದೌರ್ಬಲ್ಯದಿಂದಾಗಿ ಕೆಲವು ಆಜ್ಞೆಗಳನ್ನು ನಿರ್ವಹಿಸಲು ಸಾಧ್ಯವಾಗದಿರಬಹುದು. ದುಷ್ಪೇರಕ ಆತ್ಮದ ಕೆಲವು ಆಸೆಗಳು ಅವನನ್ನು ಆವರಿಸಿಕೊಳ್ಳಬಹುದು. ಆದ್ದರಿಂದ, ಅವನ ದುರ್ಬಲ ಸ್ವಭಾವದಿಂದಾಗಿ ಅವನು ಯಾವುದೇ ತಪ್ಪಿನ ಸಮಯದಲ್ಲಿ ಪಶ್ಚಾತ್ತಾಪಪಟ್ಟು ಕ್ಷಮೆಯನ್ನು ಕೋರಿದರೆ, ಅಲ್ಲಹನ ಕರುಣೆಯು ಅವನನ್ನು ನಾಶವಾಗದಂತೆ ರಕ್ಷಿಸುತ್ತದೆ ಎಂಬ ಹಕ್ಕಿದೆ. ನಿಜವಾದ ಕ್ಷಮೆಯಾಚನೆ ಇರಬೇಕು, ಈ ದುರ್ಬಲವು ಮನುಷ್ಯನಲ್ಲಿರುತ್ತದೆ ಇದರಿಂದಾಗಿ ಸರ್ವಶಕ್ತನಾದ ಅಲ್ಲಾಹನು ಅವನ ನಿಜವಾದ ಪಶ್ಚಾತ್ತಾಪವನ್ನು ಸ್ವೀಕರಿಸುತ್ತಾನೆ. ಮತ್ತು ಅವನನ್ನು ರಕ್ಷಿಸುತ್ತಾನೆ. ಆದ್ದರಿಂದ, ಅಲ್ಲಾಹನು ಪಶ್ಚಾತ್ತಾಪವನ್ನು ಸ್ವೀಕರಿಸದಿದ್ದರೆ, ಮನುಷ್ಯನ ಮೇಲೆ ನೂರಾರು ಆಜ್ಞೆಗಳ ಹೊರೆ ಇರುವುದಿಲ್ಲ ಎಂಬುದು ಖಚಿತವಾಗಿದೆ. ಇದರಿಂದ ಅಲ್ಲಾಹನು ತವ್ವಾಬ್ ಮತ್ತು ಗ಼ಫೂರ್ ಆಗಿರುವನು ಎಂದು ನಿಸ್ಸಂಶಯವಾಗಿಯೂ ಸಾಬೀತಾಗುತ್ತದೆ. ಬೆಂಕಿಗೆ ಹಾಕಲ್ಪಟ್ಟರು ಕೂಡ ಇನ್ನು ಮುಂದೆ ಆ ಪಾಪವನ್ನು ಖಂಡಿತವಾಗಿಯೂ ಮಾಡಲಾರೆನು ಎಂಬ ದೃಢಸಂಕಲ್ಪದೊಂದಿಗೆ ಒಂದು ಪಾಪವನ್ನು ಬಿಡುವುದಾಗಿದೆ ತೌಬದ ಅರ್ಥ. ಇದಾಗಿದೆ ಶರತ್ತು. ಇಂತಹ ತೌಬವನ್ನು ಮಾಡಬೇಕು. ಒಟ್ಟಿನಲ್ಲಿ ಮನುಷ್ಯನು ಈ ಸತ್ಯಪರತೆ ಮತ್ತು ದೃಢಸಂಕಲ್ಪದೊಂದಿಗೆ ಅಲ್ಲಾಹನ ಕಡೆಗೆ ಮರಳುವಾಗ ದಯಾವಂತನೂ ಕಾರುಣ್ಯವಂತನೂ ಆದ ಅಲ್ಲಾಹನು ಆತನ ಪಾಪದ ಶಿಕ್ಷೆಯನ್ನು ಕ್ಷಮಿಸುತ್ತಾನೆ. ತೌಬವನ್ನು ಸ್ವೀಕಾರ ಮಾಡಿಕೊಂಡು ನಾಶದಿಂದ ರಕ್ಷಿಸುವುದು ಅಲ್ಲಾಹನ ಉನ್ನತ ಗುಣಗಳಲ್ಲಿ ಒಂದಾಗಿದೆ."

ಪಶ್ಚಾತ್ತಾಪವನ್ನು ಸ್ವೀಕರಿಸಲಾಗುವುದು ಎಂಬ ಭರವಸೆ ಇಲ್ಲದಿದ್ದರೆ, ಅವನು ಪಾಪವನ್ನು ಮುಂದುವರಿಸುತ್ತಿರುತ್ತಾನೆ. ಇದು ಅಂತ್ಯವಿದ್ದಾಗ ಏನು ಪ್ರಯೋಜನ ಎಂದು ಹಲವರು ಪ್ರಶ್ನಿಸುತ್ತಾರೆ. ಇಲ್ಲ. ಅಂತ್ಯಕಾಲದ ಮೊದಲು ನೀವು ಪಶ್ಚಾತ್ತಾಪಪಟ್ಟರೆ ಅಲ್ಲಾಹನು ನಿಮ್ಮನ್ನು ರಕ್ಷಿಸುತ್ತಾನೆ. ಅವರು(ಅ) ಹೇಳಿದರು: "ಕ್ರೈಸ್ತ ಧರ್ಮವು ಪಶ್ಚಾತ್ತಾಪವನ್ನು ಸ್ವೀಕರಿಸುವುದನ್ನು ನಂಬುತ್ತದೆ, ಆದರೆ ಪಶ್ಚಾತ್ತಾಪವನ್ನು ಸ್ವೀಕರಿಸುವ ವ್ಯಕ್ತಿ ಕ್ರಿಶ್ಚಿಯನ್ ಎಂಬ ಷರತ್ತನ್ನು ಹೊಂದಿದೆ, ಆದರೆ ಇಸ್ಲಾಂನಲ್ಲಿ ಪಶ್ಚಾತ್ತಾಪಕ್ಕೆ ಯಾವುದೇ ಧರ್ಮದ ಷರತ್ತುಗಳಿಲ್ಲ." ಪ್ರತಿ ಧರ್ಮದ ಆಚರಣೆಯೊಂದಿಗೆ ಪಶ್ಚಾತ್ತಾಪವನ್ನು ಸ್ವೀಕರಿಸಬಹುದು ಮತ್ತು ಉಳಿದಿರುವ ಏಕೈಕ ಪಾಪವೆಂದರೆ ಒಬ್ಬ ವ್ಯಕ್ತಿಯು ಅಲ್ಲಾಹನ ಪುಸ್ತಕ ಮತ್ತು ಅಲ್ಲಾಹನ ಸಂದೇಶವಾಹಕನನ್ನು ನಿರಾಕರಿಸುತ್ತಾನೆ ಮತ್ತು ಒಬ್ಬ ವ್ಯಕ್ತಿಯು ತನ್ನ ಕ್ರಿಯೆಗಳಿಂದ ಮಾತ್ರ ರಕ್ಷಿಸಲ್ಪಡುವುದು ಸಂಪೂರ್ಣವಾಗಿ ಅಸಾಧ್ಯವಾದ ಸಂಗತಿಯಾಗಿದೆ, ಆದರೆ ಅದು ಒಬ್ಬನ ಪಶ್ಚಾತ್ತಾಪವನ್ನು ಸ್ವೀಕರಿಸುವುದು ಅಲ್ಲಾಹನ ಕೃಪೆಯಾಗಿದೆ ಮತ್ತು ಅವನ ಕೃಪೆಯಿಂದ ಅವನು ಪಾಪದಿಂದ ಸುರಕ್ಷಿತವಾಗಿರಲು ಅಂತಹ ಶಕ್ತಿಯನ್ನು ನೀಡುತ್ತಾನೆ. (ಚಶ್ಮ ಎ ಮಾರಿಫತ್, ರೂಹಾನಿ ಖಝಾಇನ್, ಸಂಘುಟ-23, ಪುಟ-189-190)

ಓರ್ವ ವ್ಯಕ್ತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಒಂದು ಸಭೆಯಲ್ಲಿ ಬಂದು ನಾನು ಯಾವ ವಜೀಫಾವನ್ನು ಪಠಿಸಬೇಕು ಎಂದು ಕೇಳಿದನು: ಅದಕ್ಕೆ ಹಝ್ರತ್ ಮಸೀಹ್ ಮೌಊದ್(ಅ) ಅವರು ಹೇಳಿದರು:

"ಹೆಚ್ಚು ಹೆಚ್ಚಾಗಿ ಇಸ್ತಿಗ್ಫಾರ್ ಮಾಡಿರಿ. ಮನುಷ್ಯನಿಗೆ ಎರಡೇ ಸ್ಥಿತಿ ಇರುತ್ತವೆ. ಒಂದೋ ಆತನು ಪಾಪಗಳನ್ನು ಮಾಡುತ್ತಾನೆ ಅಥವಾ ಅಲ್ಲಾಹನು ಅವನ ಪಾಪಗಳ ದುಷ್ಪರಿಣಾಮಗಳಿಂದ ರಕ್ಷಿಸುತ್ತಾನೆ. ಆದ್ದರಿಂದ ಇಸ್ತಿಗ್ಫಾರ್ ಮಾಡುವಾಗ ಈ ಎರಡೂ ಅರ್ಥಗಳನ್ನು ಗಮನದಲ್ಲಿಡಬೇಕು. ಪಾಪಗಳನ್ನು ಮಾಡದೇ ಇರಲು ಮತ್ತು ಮಾಡಿದ ಪಾಪಗಳ ದುಷ್ಪರಿಣಾಮಗಳು ಉಂಟಾಗದಿರಲು ಇಸ್ತಿಗ್ಫಾರ್ ಮಾಡಬೇಕು. ಒಂದು ಹಿಂದಿನ ಪಾಪಗಳಿಗೆ ಸರ್ವಶಕ್ತನಾದ ಅಲ್ಲಾಹನಲ್ಲಿ ಕ್ಷಮೆ ಕೋರುವುದು ಮತ್ತು ಎರಡನೆಯದು ಭವಿಷ್ಯದ ಪಾಪಗಳಿಂದ ನನ್ನನ್ನು ರಕ್ಷಿಸಲು ಸಹಾಯಕ್ಕಾಗಿ ಅಲ್ಲಾಹನನ್ನು ಕೇಳುವುದು. ದುಆವಿನಲ್ಲಿ ನಿಮ್ಮ ಸ್ವಂತ ಭಾಷೆಯಲ್ಲಿ ಪ್ರಾರ್ಥಿಸಿರಿ. ಇದು ಅವಶ್ಯಕವಾಗಿದೆ."

(ಮಲ್‌ಫೂಝಾತ್, ಸಂಪುಟ-2, ಪುಟ-320, 1984 ಆವೃತ್ತಿ)

ಈಗ ಕೇವಲ ನಿಮ್ಮ ಬಾಯಿಯಿಂದ ಕ್ಷಮೆಯಾಚಿಸುವುದು ಅಥವಾ **ಅಸ್ತಗ್‌ಫಿರುಲ್ಲಾಹಿ ರಬ್ಬಿ** ನಾನು ನನ್ನ ಪ್ರಭುವಿನಿಂದ ಕ್ಷಮೆಯಚಿಸುತ್ತೇನೆ ಎಂದು ಬರೆಸಿಕೊಳ್ಳುವುದು. ಈಗ ಭವಿಷ್ಯದಲ್ಲಿ ಯಾವುದೇ ತಪ್ಪುಗಳು ಮಾಡುವುದಿಲ್ಲ. ಇದರಿಂದ ಯಾವುದೇ ಪ್ರಯೋಜನವಿಲ್ಲ. ಮನುಷ್ಯನು ಮಾಡಿದ ತಪ್ಪುಗಳಿಗೆ ಎಂದಿಗೂ ಹಿಂತಿರುಗುವುದಿಲ್ಲ ಎಂದು ಸಾಬೀತುಪಡಿಸುವ ಪ್ರಯತ್ನವಿದೆ.

ಇಸ್ತಿಗ್ಫಾರ್‌ನ ಅರ್ಥವನ್ನು ವಿವರಿಸುವಾಗ, ಒಂದು ಸಂದರ್ಭದಲ್ಲಿ ಅವರು ಅಲೈಹಿಸ್ಸಲಾಮ್ ಹೇಳಿದರು: ಇಸ್ತಿಗ್ಫಾರ್‌ನ ಅರ್ಥವೆಂದರೆ ಯಾವುದೇ ಪಾಪವನ್ನು ಬಹಿರಂಗವಾಗಿ ಮಾಡಲಾಗುವುದಿಲ್ಲ ಮತ್ತು ಪಾಪಗಳನ್ನು ಮಾಡುವ ಶಕ್ತಿ ಕಾಣಿಸುವುದಿಲ್ಲ ಎಂದಾಗಿದೆ. ಅದೇ ಪ್ರವಾದಿಗಳ ಇಸ್ತಿಗ್ಫಾರ್‌ನ ಸತ್ಯಾಂಶವಾಗಿದೆ, ಅಂದರೆ ಅವರು ಬಹಳ ನಿರಪರಾಧಿಗಳಾಗಿದ್ದರೂ ಸಹ ಅವರು ಭವಿಷ್ಯದಲ್ಲಿ ಆ ಶಕ್ತಿ ಕಾಣಿಸಿಕೊಳ್ಳದಂತೆ ಅವರು ಇಸ್ತಿಗ್ಫಾರ್ ಅನ್ನು ಕೇಳುತ್ತಿರುತ್ತಾರೆ.

ಮತ್ತು ಸಾಮಾನ್ಯ ಜನರಿಗಾಗಿ ಇಸ್ತಿಗ್ಫಾರ್‌ನ ಇತರ ಅರ್ಥಗಳನ್ನು ತೆಗೆದುಕೊಳ್ಳಲಾಗುವುದು, ಅಲ್ಲಹನು ಅವರನ್ನು ಮಾಡಿದ ಅಪರಾಧಗಳು ಮತ್ತು ಪಾಪಗಳ ಕೆಟ್ಟ ಪರಿಣಾಮಗಳಿಂದ ರಕ್ಷಿಸುತ್ತಾನೆ ಮತ್ತು ಈ ಪಾಪಗಳನ್ನು ಕ್ಷಮಿಸುತ್ತಾನೆ ಮತ್ತು ಅದೇ ಸಮಯದಲ್ಲಿ ಭವಿಷ್ಯದ ಪಾಪಗಳಿಂದ ಅವರನ್ನು ರಕ್ಷಿಸುತ್ತಾನೆ. ಆದಾಗ್ಯೂ, ಒಬ್ಬ ವ್ಯಕ್ತಿಯು ಯಾವಾಗಲೂ ಕ್ಷಮೆಯಾಚನೆಯಲ್ಲಿ ತೊಡಗಿರುವುದು ಕಡ್ಡಾಯವಾಗಿದೆ. ಅವರು ಹೇಳಿದರು ಯಾವ ಕೆಡಕುಗಳು ಅವತರಿಸಲಾಗುತ್ತದೆಯೊ ಅವೂ ಬರಗಾಲದ ರೀತಿಯಲ್ಲಾಗಲಿ ಅಥವಾ ಮತ್ತೊಂದರ ರೀತಿಯಲ್ಲಿ ಅದರ ಅರ್ಥವೇನೆಂದರೆ ಜನರು ಇಸ್ತಿಗ್ಫಾರ್‌ನಲ್ಲಿ ತೊಡಗಬೇಕು.

ಈಗ ಲೋಕದಲ್ಲಿ ಯುದ್ಧದ ಪರಿಸ್ಥಿತಿಯಿದೆ. ಈ ಅವಸ್ಥೆಯಲ್ಲಿ ಲೋಕವನ್ನು ಮತ್ತು ಸ್ವತಃ ನಮ್ಮನ್ನು ಸುರಕ್ಷಿತವಾಗಿರಿಸಲು ಅಹ್ಮದಿಯರು ಬಹಳವಾಗಿ ಇಸ್ತಿಗ್ಫಾರ್ ಮಾಡಬೇಕು.

ಅವರು ಹೇಳಿದರು, ಇಸ್ತಿಗ್ಫಾರ್ ಎಂದರೆ **ಅಸ್ತಗ್‌ಫಿರುಲ್ಲಾಹ್- ಅಸ್ತಗ್‌ಫಿರುಲ್ಲಾಹ್** ಎಂದು ಉಚ್ಚರಿಸುವುದು ಎಂದಲ್ಲ. ವಾಸ್ತವವಾಗಿ ಅನ್ಯ ಭಾಷೆಯಿಂದಾಗಿ ಸತ್ಯವನ್ನು ಜನರಿಂದ ಮುಚ್ಚಿಡಲಾಗುತ್ತಿದೆ. ಅರಬ್ ಜನರು ಈ ವಿಷಯಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡರು, ಆದರೆ ನಮ್ಮ ದೇಶದಲ್ಲಿ ಭಾಷೆಯಿಲ್ಲದ ಕಾರಣ ಅನೇಕ ಸಂಗತಿಗಳು ಮರೆಮಾಚಲ್ಪಟ್ಟಿವೆ. ಎಷ್ಟೋ ಬಾರಿ ಕ್ಷಮೆ ಕೇಳಿದ್ದೇವೆ ಎಂದು ಹೇಳುವವರೂ ಇದ್ದಾರೆ. ನಾವು ಬಹಳಷ್ಟು ಇಸ್ತಿಗ್ಫಾರ್ ಮಾಡಿದೆವು, ನೂರು ಅಥವಾ ಸಾವಿರ ಬಾರಿ ತಸ್ಬೀಹ್ ಹೇಳಿದೆವು ಎಂದು ಅನೇಕ ಜನರು ಹೇಳುತ್ತಾರೆ. ಆದರೆ ಅವರೊಡನೆ ಇಸ್ತಿಗ್ಫಾರಿನ ಅರ್ಥವನ್ನು ಕೇಳಿದರೆ ತಬ್ಬಿಬ್ಬಾಗುತ್ತಾರೆ. ಮನುಷ್ಯನಿಂದ ಉಂಟಾದ ಪಾಪಗಳ ಮತ್ತು ಅಪರಾಧಗಳ ಶಿಕ್ಷೆ ಅನುಭವಿಸಬೇಕಾಗಿ ಬರದಿರಲು ಮತ್ತು ಅದು ಕ್ಷಮಿಸಲ್ಪಡುವಂತೆ ಆಗಲು ಮನುಷ್ಯನು ನೈಜವಾಗಿಯೂ ಮನಸ್ಸಿನಲ್ಲಿ ಕ್ಷಮೆಯನ್ನು ಯಾಚಿಸಬೇಕು. ಇನ್ನು ಮುಂದೆ ಸತ್ಕರ್ಮಗಳನ್ನು ಮಾಡಲು ಸೌಭಾಗ್ಯ ಲಭಿಸಲು ಮತ್ತು ಪಾಪಗಳಿಂದ ರಕ್ಷಣೆ ಪಡೆಯಲಿಕ್ಕಾಗಿ ಮನುಷ್ಯನು ಸದಾ ಅಲ್ಲಾಹನ ಸಹಾಯವನ್ನು ಯಾಚಿಸುತ್ತಾ ಇರಬೇಕು. ಮನಸ್ಸಿಗೆ ತಿಳಿಯದಿದ್ದರೆ ಕೇವಲ **ಅಸ್ತಗ್‌ಫಿರುಲ್ಲಾಹ್- ಅಸ್ತಗ್‌ಫಿರುಲ್ಲಾಹ್** ಎಂದು ಕೇಳುವ ಅಗತ್ಯವಿಲ್ಲ. ಹೃದಯದಿಂದ ಬಂದದ್ದು ಮಾತ್ರ ಅಲ್ಲಾಹನಿಗೆ ತಲುಪುತ್ತದೆ ಎಂಬುದನ್ನು ನೆನಪಿಡಿ. ನೀವು ನಿಮ್ಮ ಸ್ವಂತ ಭಾಷೆಯಲ್ಲಿ ಅಲ್ಲಾಹನಲ್ಲಿ ಪ್ರಾರ್ಥಿಸಬೇಕು, ಅದು ಹೃದಯದ ಮೇಲೂ ಪರಿಣಾಮ ಬೀರುತ್ತದೆ. ನಾಲಿಗೆ ಹೃದಯದ ಪುರಾವೆಯನ್ನು ಮಾತ್ರ ನೀಡುತ್ತದೆ. ಹೃದಯವು ಉತ್ಸುಕವಾಗಿದ್ದರೆ ಮತ್ತು ನಾಲಿಗೆಯನ್ನು ಬೆರೆಸಿದರೆ ಅದು ಒಳ್ಳೆಯದು. ಹೃದಯವಿಲ್ಲದ ಮೌಖಿಕ ಪ್ರಾರ್ಥನೆಗಳು ಮಾತ್ರ ನಿರರ್ಥಕವಾಗಿದೆ. ಅವು ನಿಷ್ಪ್ರಯೋಜಕವಾಗಿದೆ. ಹೌದು, ಹೃದಯದ ಪ್ರಾರ್ಥನೆಗಳು ನಿಜವಾದ ಪ್ರಾರ್ಥನೆಗಳಾಗಿವೆ. ವಿಪತ್ತಿನ ಸಮಯದ ಮೊದಲು, ಒಬ್ಬ ವ್ಯಕ್ತಿಯು ತನ್ನ ಹೃದಯದಲ್ಲಿ ಸರ್ವಶಕ್ತನಾದ ಅಲ್ಲಾಹನಲ್ಲಿ ಪ್ರಾರ್ಥಿಸುವುದನ್ನು ಮುಂದುವರೆಸಿದಾಗ, ಕ್ಷಮೆಯನ್ನು ಕೇಳುತ್ತಿರುವಾಗ, ನಂತರ ಅಲ್ಲಾಹನು, ದಯಾವಂತನೂ ಮತ್ತು ಕರುಣಾಮಯಿ, ವಿಪತ್ತನ್ನು ತಪ್ಪಿಸುತ್ತಾನೆ, ಆದರೆ ವಿಪತ್ತು ಬಹಿರಂಗವಾದಾಗ, ಅದು ದೂರವಾಗುವುದಿಲ್ಲ.

ವಿಪತ್ತು ಬಹಿರಂಗಗೊಳ್ಳುವ ಮೊದಲು ಪ್ರಾರ್ಥಿಸುವುದನ್ನು ಮುಂದುವರಿಸುತ್ತಾ ಇರಬೇಕು ಮತ್ತು ಕ್ಷಮೆಯನ್ನು ಕೇಳಬೇಕು. ಈ ರೀತಿಯಾಗಿ ಅಲ್ಲಾಹನು ವಿಪತ್ತಿನ ಸಮಯದಲ್ಲಿ ರಕ್ಷಿಸುತ್ತಾನೆ. ಯಾವುದಾದರೂ ವಿಶಿಷ್ಟವಾದ ಸಂಗತಿಯನ್ನು ನಮ್ಮ ಜಮಾಅತಿನವರು ತೋರಿಸಬೇಕು. ಒಬ್ಬ ವ್ಯಕ್ತಿ ಬೈಅತ್ ಮಾಡಿಕೊಂಡು ಯಾವುದೇ ವಿಶಿಷ್ಟ ಸಂಗತಿ ಆತನಲ್ಲಿ ಉಂಟಾಗದಿದ್ದರೆ, ಪತ್ನಿ ಮಕ್ಕಳೊಂದಿಗೆ ಹಿಂದೆ ವರ್ತಿಸುತ್ತಿದ್ದ ಹಾಗೆಯೇ ಈಗಲೂ ವರ್ತಿಸುತ್ತಿರುವನಾದರೆ, ಅದು ಒಳ್ಳೆಯ ವಿಷಯವಲ್ಲ. ಬೈಅತ್ ಮಾಡಿಕೊಂಡ ನಂತರವೂ ಅದೇ ಕೆಟ್ಟ ಸ್ವಭಾವ ಮತ್ತು ಕೆಟ್ಟ ವರ್ತನೆ ಬಾಕಿ ಇರುವುದಾದರೆ ಹಾಗೂ ಹಿಂದಿನ ಅದೇ ಸ್ಥಿತಿ ಇರುವುದಾದರೆ ಬೈಅತ್ ಮಾಡುವುದರ ಪ್ರಯೋಜನವೇನು? ಬೈಅತ್ ಮಾಡಿದ ನಂತರ ಅನ್ಯರಿಗೂ ಮತ್ತು ಸ್ವಂತ ಸಂಬಂಧಿಕರಿಗೂ ಎಂತಹ ಮಾದರಿಯನ್ನು ತೋರಿಸಬೇಕು ಎಂದರೆ, ಈತ ಹಿಂದೆ ಇದ್ದ ಹಾಗೆ ಈಗ ಇಲ್ಲವೆಂದು ಅವರು ಹೇಳುವಂತಾಗಬೇಕು. ಇದೇ ಯಥಾರ್ಥ ಇಸ್ತಿಗ್ಫಾರಿನ ಪರಿಣಾಮವಾಗಿರಬೇಕು.

ನೀವು ಸ್ವಚ್ಛವಾಗಿ ವರ್ತಿಸಿದರೆ, ಇತರರ ಮೇಲೆ ಖಂಡಿತವಾಗಿಯೂ

ನಿಮ್ಮ ದೃಢವಾದ ಪ್ರಭಾವವು ಬೀರುತ್ತದೆ ಎಂಬುದನ್ನು ಚೆನ್ನಾಗಿ ನೆನಪಿಡಿ. ಹಝ್ರತ್ ಪೈಗಂಬರ್(ಸ.ಅ)ರ ಶೀವಿ ಎಷ್ಟು ಮಹತ್ತರವಾಗಿತ್ತು. ಒಮ್ಮೆ ಅವಿಶ್ವಾಸಿಗಳು ಹಝ್ರತ್ ಪೈಗಂಬರ್(ಸ.ಅ) ಅವರು ಕೆಟ್ಟ ಪ್ರಾರ್ಥನೆ ಮಾಡುತ್ತಾರೆ ಎಂದು ಅನುಮಾನಿಸಿದರು, ಆದ್ದರಿಂದ ಎಲ್ಲಾ ಅವಿಶ್ವಾಸಿಗಳು ಒಂದುಗೂಡಿ ಕೆಟ್ಟ ಪ್ರಾರ್ಥನೆ ಮಾಡಬೇಡಿ ಎಂದು ಕೇಳಿಕೊಂಡರು. ಸಜ್ಜನರ ದರ್ಪವು ನಿಜವಾಗಿಯೂ ವ್ಯಕ್ತವಾಗಿತ್ತದೆ. ಇದನ್ನು ಸಂಪೂರ್ಣವಾಗಿ ಶುದ್ಧವಾಗಿ ಮಾಡಬೇಕು ಮತ್ತು ಅಲ್ಲಾಹನ ಸಲುವಾಗಿ ಮಾಡಬೇಕು, ಆಗ ಖಂಡಿತವಾಗಿಯೂ ನಿಮ್ಮ ಪ್ರಭಾವವು ಇತರರ ಮೇಲೆ ಬೀರುತ್ತದೆ.

(ಮಾಲ್ಫುಝಾತ್, ಸಂಪುಟ-9, ಪುಟಗಳು 372-374, 1984)

ಮತ್ತೊಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: ಅಲ್ಲಾಹನನ್ನು ಭಯಪಡುವುದು ಮತ್ತು ಮುತ್ತಖಿ ಆಗುವುದು ಬಹಳ ದೊಡ್ಡ ಸಂಗತಿಯಾಗಿದೆ. ಭಗವಂತನು ಅದರ ಮೂಲಕ ಸಾವಿರಾರು ಆಪತ್ತುಗಳಿಂದ ರಕ್ಷಿಸುತ್ತಾನೆ, ಪರಮಾತ್ಮನ ರಕ್ಷಣೆ ಅದರಲ್ಲಿ ಸೇರಿದೆಯೇ ಹೊರತು, ಯಾವ ವಿಪತ್ತು ನನ್ನನ್ನು ಆವರಿಸಲು ಸಾಧ್ಯವಿಲ್ಲ ಮತ್ತು ಯಾರೂ ತೃಪ್ತರಾಗಬಾರದು. ವಿಪತ್ತುಗಳು ಇದ್ದಕ್ಕಿದ್ದಂತೆ ಬರುತ್ತವೆ. ರಾತ್ರಿ ಏನಾಗುತ್ತೋ ಯಾರಿಗೆ ಗೊತ್ತು. ಒಮ್ಮೆ ಹಝ್ರತ್ ಪೈಗಂಬರ್(ಸ) ಅವರು ಎದ್ದು ನಿಂತು, ಅವರು ಮೊದಲು ತುಂಬಾ ಅಳುತ್ತಾರೆ, ನಂತರ ಅವರು ಜನರನ್ನು ಉದ್ದೇಶಿಸಿ ಹೇಳಿದರು. ಓ ಅಲ್ಲಾಹನ ಸೇವಕರೇ, ಅಲ್ಲಾಹನಿಗೆ ಭಯಪಡಿರಿ. ಅಲ್ಲಾಹನಿಗೆ ಭಯಪಡಿರಿ. ವಿಪತ್ತುಗಳು ಇರುವೆಗಳಂತೆ ಮನುಷ್ಯನಿಗೆ ಅಂಟಿಕೊಳ್ಳುತ್ತವೆ. ಪ್ರಾಮಾಣಿಕ ಪಶ್ಚಾತ್ತಾಪ ಮತ್ತು ಕ್ಷಮೆಯನ್ನು ಯಾಚಿಸುವುದನ್ನು ಹೊರತುಪಡಿಸಿ ಅವುಗಳನ್ನು ತಪ್ಪಿಸಲು ಯಾವುದೇ ಮಾರ್ಗವಿಲ್ಲ. (ಮಲ್ಫೂಝಾತ್, ಸಂಪುಟ-9, ಪುಟ-372-374, 1984)

ಮತ್ತೊಂದು ಸಂದರ್ಭದಲ್ಲಿ ಇಸ್ತಿಗ್ಫಾರ್‌ನ ಅರ್ಥ ಇದಾಗಿದೆ ಎಂದು ವಿವರಿಸುತ್ತಾ ಹೇಳುತ್ತಾರೆ: "...ತನ್ನ ಹಿಂದಿನ ಅಪರಾಧಗಳು ಮತ್ತು ಪಾಪಗಳ ಶಿಕ್ಷೆಯಿಂದ ಸರ್ವಶಕ್ತನಾದ ಅಲ್ಲಾಹನಿಂದ ರಕ್ಷಣೆ ಪಡೆಯಲು ಬಯಸಬೇಕು ಮತ್ತು ಭವಿಷ್ಯದ ಪಾಪಗಳ ಆಯೋಗದಿಂದ ರಕ್ಷಣೆ ಪಡೆಯಲು ಕೇಲಿಕೊಳ್ಳಬೇಕು. ಇಸ್ತಿಗ್ಫಾರ್ ಪ್ರವಾದಿಗಳು ಮತ್ತು ಸಾಮಾನ್ಯ ಜನರು ಸಹ ಕೇಳಿಕೊಳ್ಳುತ್ತಿದ್ದರು. ಕೆಲವು ಅಜ್ಞಾನಿಗಳಾದ ಪಾದರಿಗಳು ಹಝ್ರತ್ ಪೈಗಂಬರ್(ಸ)ರ ಇಸ್ತಿಗ್ಫಾರಿನ ಕುರಿತು ಆಕ್ಷೇಪವೆತ್ತಿರುವರು. ಹಝ್ರತ್ ಪೈಗಂಬರ್(ಸ) ಪಾಪಿಯಾಗಿರುವರು ಎಂಬುದು ಅವರ ಇಸ್ತಿಗ್ಫಾರ್ ಮಾಡುವಿಕೆಯಿಂದ ಸಾಬೀತಾಗುತ್ತದೆ ಎಂದು ಅವರು ಬರೆದಿರುವರು. ಇಸ್ತಿಗ್ಫಾರ್ ಎಂಬುದು ಒಂದು ಉತ್ತಮ ಗುಣವಾಗಿದೆ ಎಂದು ಈ ಮೂಢರಿಗೆ ಗೊತ್ತಿಲ್ಲ. ದೌರ್ಬಲ್ಯ ಮತು ಬಲಹೀನತೆ ಮನುಷ್ಯನ ಸಹಜಗುಣ ಎಂಬ ರೀತಿಯಲ್ಲಿ ಮನುಷ್ಯನನ್ನು ಸೃಷ್ಟಿಸಲಾಗಿದೆ. ಪ್ರವಾದಿಗಳು ಈ ಪ್ರಕೃತಿ ಸಹಜವಾದ ದೌರ್ಬಲ್ಯ ಮತ್ತು ಮಾನುಷಿಕ ಬಲಹೀನತೆಯನ್ನು ಚೆನ್ನಾಗಿ ಬಲ್ಲರು. ಆದುದರಿಂದ ಅವರು ಹೀಗೆ ದುಆ ಮಾಡುತ್ತಾರೆ: ಹೇ ಪ್ರಭೂ, ಆ ಮಾನುಷಿಕ ದೌರ್ಬಲ್ಯಗಳು ಉಂಟಾಗದ ರೀತಿಯಲ್ಲಿ ನಮ್ಮ ಸಂರಕ್ಷಣೆ ಮಾಡು. ತನ್ನ ಸ್ವಂತ ಸಾಮರ್ಥ್ಯದಿಂದ ಪಾಪಗಳಿಂದ ರಕ್ಷಣೆ ಪಡೆಯಬಹುದು ಎಂದು ಯಾರಿಗೂ ವಾದಿಸಲು ಸಾಧ್ಯವಲ್ಲ. ಆದ್ದರಿಂದ ಸಂರಕ್ಷಣೆಗಾಗಿ ಪ್ರವಾದಿಗಳೂ ಅಲ್ಲಾಹನನ್ನು ಅವಲಂಬಿಸುತ್ತಾರೆ. ಒಟ್ಟಿನಲ್ಲಿ ದೇವನ ಆರಾಧಕ ಎಂಬುದನ್ನು ವ್ಯಕ್ತಪಡಿಸಲಿಕ್ಕಾಗಿ ಹಝ್ರತ್ ಪೈಗಂಬರ್(ಸ) ಕೂಡ ಸ್ವಂತ ಸಂರಕ್ಷಣೆಗಾಗಿ ಇತರ ಪ್ರವಾದಿಗಳ ಹಾಗೆ ಅಲ್ಲಾಹನೊಡನೆ ಯಾಚಿಸುತ್ತಿದ್ದರು.

ಹಝ್ರತ್ ಈಸಾ ಮಸೀಹ್(ಅ) ಕ್ಷಮೆ ಯಾಚನೆ ಮಾಡುತ್ತಿರಲಿಲ್ಲ ಎಂಬುದು ಕ್ರೈಸ್ತರ ತಪ್ಪುಗ್ರಹಿಕೆಯಾಗಿದೆ. ಈಸಾ ಮಸೀಹರು ಅನೇಕ ಬಾರಿ ತಮ್ಮ ಬಲಹೀನತೆಯನ್ನು ಒಪ್ಪಿಕೊಂಡಿದ್ದರು ಮತ್ತು ಇಸ್ತಿಗ್ಫಾರ್ ಕೂಡ ಮಾಡುತ್ತಿದ್ದರು ಎಂದು ಇಂಜೀಲಿನಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. **ಈಲಿ ಈಲಿ ಲಿಮಾ ಸಬಖ್ತಾನಿ** ಎಂಬುದರ ಅರ್ಥವೇನೆಂದು ನೀವು ಹೇಳಿರಿ? ಈಸಾ(ಅ) ಅಬೀ ಅಬೀ ಎಂದು ಏಕೆ ಕರೆಯಲಿಲ್ಲ. ಹೀಬ್ರೂ ಭಾಷೆಯಲ್ಲಿ ಈಲ್ ಎಂಬುದರ ಅರ್ಥ ದೇವನು ಎಂದಾಗಿದೆ. ಅದರ ತಾತ್ಪರ್ಯವೇನೆಂದರೆ, ಕರುಣೆದೋರು ಮತ್ತು ಕೃಪೆದೋರು ಹಾಗೂ ಯಾವುದೇ ಸಹಾಯವಿಲ್ಲದ ರೀತಿಯಲ್ಲಿ ನನ್ನನ್ನು ಬಿಡಬೇಡ. ಎಂದರೆ ನನ್ನ ಸಂರಕ್ಷಣೆ ಮಾಡು ಎಂದಾಗಿದೆ. ವಾಸ್ತವವಾಗಿ, ಕಷ್ಟವೇನೆಂದರೆ ನಮ್ಮ ಹಿಂದೂಸ್ತಾನದಲ್ಲಿ ಭಾಷೆಗಳ ಭಿನ್ನಭಿಪ್ರಾಯ ಇರುವುದರಿಂದ ಇಸ್ತಿಗ್ಫಾರ್ (ಕ್ಷಮೆಯಾಚನೆ) ನ ಅರ್ಥವೇ ಕಳೆದುಹೋಗಿದೆ. ಮತ್ತು ಆ ಪ್ರಾರ್ಥನೆಗಳನ್ನು ಜಂತರ್ ಮಂತರ್ ಎಂದು ಅರ್ಥೈಸಲಾಗಿದೆ. ನಮಾಝ್ ಎಂದರೇನು ಮತ್ತು ಇಸ್ತಿಗ್ಫಾರ್ (ಕ್ಷಮೆಯಾಚನೆ) ಎಂದರೇನು ಮತ್ತು ತೌಬ (ಪಶ್ಚಾತ್ತಾಪ) ಎಂದರೇನು? ನೀವು ಯಾರಿಗಾದರೂ ಇಸ್ತಿಗ್ಫಾರ್ ಹೇಳಲು ಸಲಹೆ ನೀಡಿದರೆ, ನಾನು ಇಸ್ತಿಗ್ಫಾರ್ ಅನ್ನು ನೂರು ಬಾರಿ ಅಥವಾ ಇನ್ನೂರು ಬಾರಿ ಉಚ್ಚರಿಸುತ್ತೇನೆ ಎಂದು ಉತ್ತರಿಸುತ್ತಾನೆ, ಆದರೆ ನೀವು ಅವನ ಅರ್ಥವನ್ನು ಕೇಳಿದರೆ ಅವನಿಗೆ ಏನೂ ತಿಳಿದಿಲ್ಲ.

ಇಸ್ತಿಗ್ಫಾರ್ ಎಂಬುದು ಅರೇಬಿಕ್ ಪದವಾಗಿದೆ, ಇದರರ್ಥ ಕ್ಷಮೆ ಕೇಳುವುದು, ಅಂದರೆ ನಮ್ಮ ಮುಂದೆ ಮಾಡಿದ ಪಾಪಗಳ ಕೆಟ್ಟ ಪರಿಣಾಮಗಳಿಂದ ಓ ಪ್ರಭು ನಮ್ಮನ್ನು ರಕ್ಷಿಸು, ಏಕೆಂದರೆ ಪಾಪವು ವಿಷವಾಗಿದೆ ಮತ್ತು ಅದರ ಪರಿಣಾಮವೂ ಕಡ್ಡಾಯವಾಗಿದೆ ಮತ್ತು ಭವಿಷ್ಯದಲ್ಲಿ ನಮ್ಮನ್ನು ಪಾಪಗಳು ನಮ್ಮಿಂದ ಆಗದೆ ಇರುವಹಾಗೆ ನಮ್ಮನ್ನು ರಕ್ಷಿಸು.

ಕೇವಲ ಮೌಖಿಕ ಪುನರಾವರ್ತನೆಯಿಂದ ಅರ್ಥವನ್ನು ಸಾಧಿಸಲಾಗುವುದಿಲ್ಲ, "ತೌಬ (ಪಶ್ಚಾತ್ತಾಪ) ಎಂದರೆ ವಿಷಾದ ಮತ್ತು ಪಶ್ಚಾತ್ತಾಪದಿಂದ ಕೆಟ್ಟ ಕಾರ್ಯದಿಂದ ದೂರವಿರುವುದು" ಎಂದು ಅವರು(ಅ) ಹೇಳಿದರು. ಪಶ್ಚಾತ್ತಾಪವು ಕೆಟ್ಟ ಕಾರ್ಯವಲ್ಲ, ಆದರೆ ಪಶ್ಚಾತ್ತಾಪ ಪಡುವ ವ್ಯಕ್ತಿಯು ದೇವರಿಗೆ ತುಂಬಾ ಪ್ರಿಯನು ಎಂದು ಬರೆಯಲಾಗಿದೆ. ದೇವರ ಹೆಸರೂ ತವ್ವಾಬ್ (ಪಶ್ಚಾತ್ತಾಪ ಸ್ವೀಕರಿಸುವವನು) ಎಂದಾಗಿದೆ. ಇದರರ್ಥ ಒಬ್ಬ ಮನುಷ್ಯನು ತನ್ನ ಪಾಪಗಳು ಮತ್ತು ಕೆಟ್ಟ ಕಾರ್ಯಗಳಿಗೆ ಪಶ್ಚಾತ್ತಾಪಪಟ್ಟಾಗ ಮತ್ತು ಭವಿಷ್ಯದಲ್ಲಿ ಈ ದುಷ್ಕೃತ್ಯದಿಂದ ದೂರವಿರಲು ಪ್ರತಿಜ್ಞೆ ಮಾಡಿದಾಗ, ಸರ್ವಶಕ್ತನಾದ ಅಲ್ಲಾಹನು ಅವನ ಕಡೆಗೆ ಕರುಣೆಯಿಂದ ತಿರುಗುತ್ತಾನೆ. ಅಲ್ಲಾಹನು ಮಾನವ ಪಶ್ಚಾತ್ತಾಪಕ್ಕಿಂತ ಹೆಚ್ಚು ಪಶ್ಚಾತ್ತಾಪ ಪಡುತ್ತಾನೆ. ಹದೀಸಿನಲ್ಲಿ ಹೀಗೆ ಬಂದಿದೆ: ಮನುಷ್ಯನು ದೇವನ ಕಡೆಗೆ ಒಂದು ಗೇಣಿನಷ್ಟು ಹೋದರೆ ದೇವನು ಆತನ ಕಡೆಗೆ ಒಂದು ಮೊಣದಷ್ಟು ಬರುತ್ತಾನೆ. ಮನುಷ್ಯನು ನಡೆದುಕೊಂಡು ಹೋದರೆ ದೇವನು ಆತನ ಕಡೆಗೆ ಓಡುತ್ತಾ ಹೋಗುತ್ತಾನೆ. ಎಂದರೆ ಮನುಷ್ಯನು ಅಲ್ಲಾಹನ ಕಡೆಗೆ ಗಮನ ನೀಡಿದರೆ ಅಲ್ಲಾಹನು ಕೂಡ ಕಾರುಣ್ಯ, ಕೃಪೆ ಮತ್ತು ಮಗ್ಫಿರತ್ ತೋರಿಸುತ್ತಾ ಅಪರಿಮಿತವಾದ ಅನುಗ್ರಹ ಸುರಿಸುತ್ತಾನೆ. ಆದರೆ ದೇವನಿಂದ ಮುಖ ತಿರುಗಿಸಿದರೆ ದೇವನಿಗೆ ಅದರ ಯಾವುದೇ ಪರಿವೆ ಇರುವುದಿಲ್ಲ. (ಮಲ್ಫೂಝಾತ್, ಸಂಪುಟ-10, ಪುಟಗಳು 336-339, 1984)

ಇಸ್ತಿಗ್ಫಾರ್‌ನ ವಾಸ್ತವತೆಯನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಪವಿತ್ರ ಖುರ್‌ಆನ್ ದೇವನ ಎರಡು ಹೆಸರುಗಳನ್ನು ಮುಂದಿರಿಸಿದೆ. ಅಲ್‌ಹಯ್ಯ್ ಮತ್ತು ಅಲ್‌ಖಯ್ಯೂಮ್. ಅಲ್‌ಹಯ್ಯ್ ಎಂಬುದರ ಅರ್ಥ ದೇವನು ಜೀವಂತನೂ ಮತ್ತು ಇತರರಿಗೆ ಜೀವವನ್ನು ದಯಪಾಲಿಸುವವನೂ ಆಗಿರುವನು ಎಂದಾಗಿದೆ. ಅಲ್‌ಖಯ್ಯೂಮ್ ಎಂಬುದರ ಅರ್ಥ ಸ್ವತಃ ನೆಲೆನಿಂತಿರುವವನೂ ಮತ್ತು ಇತರರ ನೆಲೆನಿಲ್ಲುವಿಕೆಗೆ ಯಥಾರ್ಥ ಕಾರಣಕರ್ತನೂ ಎಂದಾಗಿದೆ. ಪ್ರತಿಯೊಂದು ವಸ್ತುವಿನ ಬಾಹ್ಯ ಮತ್ತು ಆಂತರಿಕ ನೆಲೆನಿಲ್ಲುವಿಕೆ ಹಾಗೂ ಜೀವ ಈ ಎರಡು ಗುಣಗಳ ಮೂಲಕವೇ ಆಗಿದೆ. ಒಟ್ಟಿನಲ್ಲಿ ಅಲ್ಲಾಹನನ್ನು ಆರಾಧಿಸಬೇಕು ಎಂಬುದನ್ನು ಹಯ್ಯ್ ಎಂಬ ಪದ ಆವಶ್ಯಪಡುತ್ತದೆ. ಅದರ ಪ್ರಕಟಣೆ ಸೂರ ಫಾತಿಹದ **ಇಯ್ಯಾಕ ನಅ್‌ಬುದು** ಆಗಿದೆ. (ಅರ್ಥ: ನಿನ್ನನ್ನು ಮಾತ್ರ ನಾವು ಆರಾಧಿಸುತ್ತೇವೆ.) ಅಲ್ಲಾಹನಿಂದ ನೆರವು ಯಾಚಿಸಬೇಕು ಎಂಬುದನ್ನು ಅಲ್‌ಖಯ್ಯೂಮ್ ಎಂಬ ಪದ ಆವಶ್ಯಪಡುತ್ತದೆ. ಅದನ್ನು **ಇಯ್ಯಾಕ ನಸ್ತಈನ್** (ನಿನ್ನಿಂದ ಮಾತ್ರ ಸಹಾಯವನ್ನು ಯಾಚಿಸುತ್ತೇವೆ.) ಎಂಬ ವಾಕ್ಯದ ಮೂಲಕ ಸೂಚಿಸಲಾಗಿದೆ. ಹಯ್ಯು ಪದವು ಆರಾಧನೆಯನ್ನು ಬಯಸುತ್ತದೆ ಏಕೆಂದರೆ ಅವನು ಸೃಷ್ಟಿಸಿದನು ಮತ್ತು ಸೃಷ್ಟಿಸಿದ ನಂತರ ಹಾಗೆಯೇ ಬಿಡಲಿಲ್ಲ, ಉದಾಹರಣೆಗೆ ಬಿಲ್ಡರ್ (ಕಟ್ಟಡವನ್ನು ನಿರ್ಮಿಸುವ ಮೇಸ್ತ್ರಿ) ಕಟ್ಟಡವನ್ನು ನಿರ್ಮಿಸಿದವನ ಮರಣವು ಕಟ್ಟಡಕ್ಕೆ ಹಾನಿ ಮಾಡುವುದಿಲ್ಲ. ಆದರೆ ಪ್ರತಿಯೊಂದು ಅವಸ್ಥೆಯಲ್ಲೂ ಮನುಷ್ಯನಿಗೆ ದೇವನ ಆವಶ್ಯಕತೆ ಬರುತ್ತದೆ. ಆದ್ದರಿಂದ ದೇವನಿಂದ ಸಹಾಯವನ್ನು ಯಾಚಿಸುವುದು ಅಗತ್ಯ. ಇದೇ ಯಥಾರ್ಥ ಇಸ್ತಿಗ್ಫಾರ್ ಆಗಿದೆ. ನಂತರ ಪಾಪಗಳನ್ನು ಮಾಡುವ ಜನರಿಗೆ ಅದರ ಕೆಟ್ಟ ಪರಿಣಾಮಗಳಿಂದ ರಕ್ಷಿಸಲು ಅದನ್ನು ವಿಸ್ತರಿಸಲಾಯಿತು. ಪಾಪಗಳನ್ನು ಮಾಡದೇ ಇದ್ದರೂ ಜೀವಿಸಲು, ಸರ್ವಶಕ್ತನಾದ ಅಲ್ಲಾಹನ ಆಶ್ರಯದಲ್ಲಿರಲು ಇಸ್ತಿಗ್ಫಾರ್ ಮುಖ್ಯವಾಗಿದೆ. "ವಾಸ್ತವವೇನೆಂದರೆ ಮಾನವನನ್ನು ದೌರ್ಬಲ್ಯಗಳಿಂದ ತಪ್ಪಿಸುವುದು. ಹಾಗಾಗಿ, ಯಾವ ವ್ಯಕ್ತಿಯು ಮಾನವನಾಗಿ ಇಸ್ತಿಗ್ಫಾರ್‌ನ ಅಗತ್ಯವನ್ನು ಪರಿಗಣಿಸುವುದಿಲ್ಲವೊ ಅಂತಹ ವ್ಯಕ್ತಿಯು ಅಸಂಸ್ಕೃತ ನಸ್ತಕನಾಗಿದ್ದಾನೆ. (ಮಲ್ಫೂಝಾತ್, ಸಂಪುಟ-3, ಪುಟ-217, 1984)

ನಂತರ ಒಂದು ಸ್ಥಳದಲ್ಲಿ ಅವರು ಇಸ್ತಿಗ್ಫಾರ್‌ನ ವಾಸ್ತವವನ್ನು ಈ ಕೆಳಗಿನಂತೆ ವಿವರಿಸಿದರು: ಪಾಪವು ಮಾನವ ರಕ್ತದಲ್ಲಿ ಬೆರೆತಿರುವ ಒಂದು ಹುಳುವಿನಂತಿದೆ, ಆದರೆ ಅದನ್ನು ಇಸ್ತಿಗ್ಫಾರ್‌ನಿಂದ ಮಾತ್ರ ಗುಣಪಡಿಸಬಹುದು.

ಇಸ್ತಿಗ್‌ಫಾರ್ (ಕ್ಷಮೆಯಾಚನೆ) ಎಂದರೇನು? ಅದೇನೆಂದರೆ, ತಾನು ಮಾಡಿದ ಪಾಪಗಳನ್ನು ಸರ್ವಶಕ್ತನಾದ ಅಲ್ಲಾಹನು ಅದರ ದುಷ್ಪರಿಣಾಮಗಳಿಂದ ತನ್ನನ್ನು ರಕ್ಷಿಸಲಿ ಮತ್ತು ಇನ್ನೂ ಮಾಡದಿರುವ ಮತ್ತು ಮಾನವನಲ್ಲಿ ಇರುವಂತಹವುಗಳಿಂದ ಸಂರಕ್ಷಿಸಲಿ, ಅದನ್ನು ಮಾಡುವ ಕಾಲವೆ ಬರದಿರಲಿ ಮತ್ತು ಅವು ಒಳೊಳಗೇ ಸುಟ್ಟು ಬೂದಿಯಾಗಲಿ ಎಂದಾಗಿದೆ.

ಈ ಸಮಯವು ಬಹಳ ಭಯದ ಸಮಯವಾಗಿದೆ ಆದ್ದರಿಂದ ತೌಬ (ಪಶ್ಚಾತ್ತಾಪ) ಮತ್ತು ಇಸ್ತಿಗ್‌ಫಾರ್ (ಕ್ಷಮೆಯಾಚನೆ) ಅನ್ನು ಮಾಡುವುದರಲ್ಲಿ ನಿರತರಾಗಿರಿ." ನಾವು ಕಳೆಯುತ್ತಿರುವ ಈ ಕಾಲವು ಬಹಳ ಭಯಾನಕವಾಗಿದೆ. ಪಶ್ಚಾತ್ತಾಪ ಮತ್ತು ಕ್ಷಮೆಯಾಚನೆ ಮಾಡುವುದರಲ್ಲಿ ತಮ್ಮನ್ನು ತೊಡಗಿಸಿಕೊಳ್ಳಿ ಮತ್ತು ನಿಮ್ಮ ಸ್ವಯಂ ಅಧ್ಯಯನವನ್ನು ಮುಂದುವರಿಸಿ. ಪ್ರತಿಯೊಂದು ಧರ್ಮ ಮತ್ತು ಸಮೂದಾಯದ ಜನರು ಮತ್ತು ಪುಸ್ತಕದ ಜನರು (ಎಹ್ಲೆ ಕಿತಾಬ್) ದಾನ ಮತ್ತು ಧರ್ಮದಿಂದ ಶಿಕ್ಷೆಯನ್ನು ತಪ್ಪಿಸಲಾಗುವುದು ಎಂದು ವಿಶ್ವಾಸ ಹೊಂದಿರುತ್ತಾರೆ, ಆದರೆ ಶಿಕ್ಷೆ ಬರುವ ಮೊದಲು. ಆದರೆ ಅದು (ಶಿಕ್ಷೆ) ಬಹಿರಂಗವಾದಾಗ, ಅದನ್ನು ಎಂದಿಗೂ ತಪ್ಪಿಸಲಾಗುವುದಿಲ್ಲ. ಆದ್ದರಿಂದ ಈಗಲೇ ಕ್ಷಮೆ ಕೇಳಿ ಮತ್ತು ನಿಮ್ಮ ಸರದಿ ಬರದಂತೆ ಪಶ್ಚಾತ್ತಾಪ ಪಡಲು ಪ್ರಾರಂಭಿಸಿ ಮತ್ತು ಅಲ್ಲಾಹನು ನಿಮ್ಮನ್ನು ಸಂರಕ್ಷಿಸಲಿ." (ಮಲ್‌ಫೂಝಾತ್, ಸಂಪುಟ–5, ಪುಟ–299, 1984)

ಹಾಗಾಗಿ ಇಂದಿನ ಜಗತ್ತಿನ ಪರಿಸ್ಥಿತಿಯನ್ನು ಮುಂದಿಟ್ಟುಕೊಂಡು ನಾನು ಮೊದಲೇ ಹೇಳಿದಂತೆ ಕ್ಷಮೆಯಾಚನೆ ಮಾಡಬೇಕು. ಅಲ್ಲಾಹನು ನಮ್ಮನ್ನು ಎಲ್ಲಾ ರೀತಿಯ ಅನಿಷ್ಟ ಮತ್ತು ವಿಪತ್ತುಗಳಿಂದ ಸಂರಕ್ಷಿಸಲಿ.

ಮುಂದೆ ಪಶ್ಚಾತ್ತಾಪದ (ತೌಬ) ಸತ್ಯಾಂಶವನ್ನು ಹೀಗೆ ಒಂದೆಡೆ ವಿವರಿಸಿದರು. ಅವರು(ಅ) ಹೇಳಿದರು: "ಪಶ್ಚಾತ್ತಾಪ ಮತ್ತು ಕ್ಷಮೆಯಾಚನೆಯನ್ನು ನಿರಾಕರಿಸುವುದು ವಾಸ್ತವವಾಗಿ ಮಾನವ ಪ್ರಗತಿಯ ಬಾಗಿಲು ಮುಚ್ಚುತ್ತದೆ ಎಂಬುದನ್ನು ನೆನಪಿಡಿ." ಪಶ್ಚಾತ್ತಾಪದ ವಾಸ್ತವವನ್ನು ನಿರಾಕರಿಸುವವನು ಪ್ರಗತಿಯ ಬಾಗಿಲನ್ನು ಮುಚ್ಚುತ್ತಾನೆ, ಏಕೆಂದರೆ ಇದು ಎಲ್ಲರಿಗೂ ಸ್ಪಷ್ಟವಾಗಿದೆ. ಮನುಷ್ಯನು ಪರಿಪೂರ್ಣನಲ್ಲ ಎಂಬುದು ಸ್ವತಃ ಸ್ಪಷ್ಟವಾಗಿದೆ. ತನ್ನಲ್ಲಿ, ಅಂದರೆ, ಅವನು ತನ್ನಲ್ಲಿ ಸಂಪೂರ್ಣವಾಗಿ ಪರಿಪೂರ್ಣನಲ್ಲ, ಆದರೆ ಪೂರ್ಣಗೊಳ್ಳುವ ಅವಶ್ಯಕತೆಯಿದೆ, ಮತ್ತು ಅವನು ತನ್ನ ಸ್ಪಷ್ಟ ಸ್ಥಿತಿಯಲ್ಲಿ ಜನಿಸಿದಂತೆ, ಅವನು ಕ್ರಮೇಣ ತನ್ನ ಜ್ಞಾನವನ್ನು ವಿಸ್ತರಿಸುತ್ತಾನೆ. ಅದೇ ರೀತಿ ಅವನು ಹುಟ್ಟಿ ಪ್ರಜ್ಞೆ ಬಂದಾಗ ಅವನ ನೈತಿಕ ಸ್ಥಿತಿ ತೀರಾ ಕೆಳಮಟ್ಟದಲ್ಲಿರುತ್ತದೆ. ಹಾಗಾಗಿ ಯಾರಾದರೂ ಚಿಕ್ಕ ಮಕ್ಕಳ ಸ್ಥಿತಿಗತಿಗಳನ್ನು ಅವಲೋಕಿಸಿದಾಗ ಹೆಚ್ಚಿನ ಮಕ್ಕಳು ಅತ್ಯಂತ ಕೀಳು ಮಟ್ಟದ ಸಂಘರ್ಷಕ್ಕೆ ಇನ್ನೊಬ್ಬನನ್ನು ಹೊಡೆಯಲು ಹಾತೊರೆಯುತ್ತಾರೆ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ." ಮಕ್ಕಳ ಜಗಳವಾದಾಗ. "ಸಾಮಾನ್ಯವಾಗಿ ಆಗಾಗ್ಗೆ ಅವರು ಸಂಭಾಷಣೆಯಲ್ಲಿ ಸುಳ್ಳು ಮತ್ತು ಇತರ ಮಕ್ಕಳನ್ನು ನಿಂದಿಸುವ ಅಭ್ಯಾಸವನ್ನು ಹೊಂದಿರುತ್ತಾರೆ, ಮತ್ತು ಅವರಲ್ಲಿ ಕೆಲವರು ಕಳ್ಳತನ ಮತ್ತು ಕದಿಯುವ ಅಭ್ಯಾಸವನ್ನು ಹೊಂದಿರುತ್ತಾರೆ, ಅಸೂಯೆ ಮತ್ತು ಜಿಪುಣತೆ, ಮತ್ತು ನಂತರ ಯೌವನದ ವಿನೋದವು ಮುನ್ನೆಲೆಗೆ ಬಂದಾಗ, ನಫ್ಸ್–ಎ–ಅಮ್ಮಾರಹ್ (ದುಷ್ಪ್ರೇರಕ ಆತ್ಮದ) ವು ಅವರ ಮೇಲೆ ಸವಾರಿ ಮಾಡುತ್ತದೆ ಮತ್ತು ಆಗಾಗ್ಗೆ ಅಂತಹ ಅನರ್ಹ ಮತ್ತು ಹೇಳಲಾಗದ ಕೃತ್ಯಗಳು ಅವರಿಂದ ಕಾಣಿಸಿಕೊಳ್ಳುತ್ತವೆ, ಅವುಗಳು ಸ್ಪಷ್ಟವಾದ ನಿಷ್ಪಟತೆ ಮತ್ತು ಅಶ್ಲೀಲತೆಗಳಾಗಿವೆ. ಅವು ವ್ಯರ್ಥ ಮತ್ತು ಅನೈತಿಕಕೃತ್ಯಗಳಲ್ಲಿ ಪ್ರವೇಶಿಸುತ್ತದೆ. ಸಾರಾಂಶವೇನೆಂದರೆ, ಹೆಚ್ಚಿನವರಿಗೆ ಮೊದಲ ಹಂತವೆಂದರೆ ಕೊಳಕು ಜೀವನ. "ಪರಿಸರ ಮತ್ತು ಸಮಾಜವು ಅವರನ್ನು ಕೊಳಕು ಮಾಡುತ್ತದೆ." ಪರಿಶುದ್ಧ ಮನುಷ್ಯನು, ಈ ಕೊಳಕು ಜಗತ್ತಿನಲ್ಲಿ ಹೇಗೆ ಹರಡುತ್ತದೆ ಎಂದು ನೋಡಿದಾಗ ಅವನ ಗಮನವು ಅಲ್ಲಾಹನ ಕಡೆಗೆ ತಿರುಗುತ್ತದೆ, ಮತ್ತು ಅವನ ಗಮನದ ಪರಿಣಾಮವಾಗಿ ಏನಾಗುತ್ತದೆ ಎಂದರೆ, "ಮತ್ತು ನಿರ್ದಯ ವಿಷಯಗಳಿಂದ ನಿಜವಾಗಿಯೂ ಪಶ್ಚಾತ್ತಾಪ ಪಡುವ ಮೂಲಕ ಅದನ್ನು ದೂರವಿಡುತ್ತಾನೆ." ನಂತರ ಅವನು ಪಶ್ಚಾತ್ತಾಪ ಪಡುತ್ತಾನೆ ಮತ್ತು ಅವನ ಸ್ವಭಾವದ ಉಡುಪನ್ನು ಶುದ್ಧೀಕರಿಸುವ ಬಗ್ಗೆ ಚಿಂತಿಸುತ್ತಾನೆ. ಇವುಗಳು ಸಾಮಾನ್ಯವಾಗಿ ಮಾನವ ಜೀವನದ ಜೀವನಚರಿತ್ರೆಯಾಗಿದ್ದು, ಮಾನವಕುಲವು ವ್ಯವಹರಿಸಬೇಕಾಗುತ್ತದೆ. ಆದ್ದರಿಂದ ಪಶ್ಚಾತ್ತಾಪವನ್ನು ಸ್ವೀಕರಿಸುವುದಿಲ್ಲ ಎಂಬುದು ನಿಜವಾಗಿದ್ದರೆ, ದೇವರು ಯಾರನ್ನೂ ಉಳಿಸುವ ಉದ್ದೇಶವನ್ನು ಹೊಂದಿಲ್ಲ ಎಂಬುದು ಸ್ಪಷ್ಟವಾಗಿ ಸಾಬೀತಾಗುತ್ತದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. (ಚಶ್ಮ–ಎ–ಮಾರಿಫತ್, ರೂಹಾನಿ ಖಝಾಈನ್, ಸಂಪುಟ–23, ಪುಟಗಳು 192–193)

ಒಂದು ಸಂದರ್ಭದಲ್ಲಿ, ಕೆಲವರು ಬಂದು ಬೈಅತ್ ಮಾಡಿದರು, ಸಭೆ ಆಯೋಜಿಸಲಾಗಿತ್ತು, ಅವರೆಲ್ಲರನ್ನು ಉದ್ದೇಶಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸಲಹೆ ನೀಡಿದರು. ಅವರು(ಅ) ಹೇಳಿದರು, "ಸರ್ವಶಕ್ತನಾದ ಅಲ್ಲಾಹನ ಉದ್ದೇಶವೇನೆಂದರೆ ಮನುಷ್ಯ ಶುದ್ಧ ಪಶ್ಚಾತ್ತಾಪ ಪಡಬೇಕು ಮತ್ತು ಅವನಿಂದ ಯಾವುದೇ ಪಾಪವಾಗದಿರಲಿ ಎಂದು ದುಆ ಮಾಡಬೇಕು. ಪರಲೋಕದಲ್ಲಿ ಅಥವಾ ಇಹಲೋಕದಲ್ಲಿ ಅವಮಾನವಾಗದಂತೆ ಪ್ರಾರ್ಥಿಸಬೇಕು. ಅವರು(ಅ) ಹೇಳಿದರು: ಮನುಷ್ಯನು ಆಲೋಚಿಸಿ ಮಾತನಾಡದಿದ್ದರೆ ಮತ್ತು ಅವನಲ್ಲಿ ಯಾವುದೇ ವಿನಮ್ರಭಾವ ಇಲ್ಲದಿದ್ದರೆ, ಆ ಮಾತುಗಳು ದೇವರಿಗೆ ತಲುಪುವುದಿಲ್ಲ.

